# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXII - 1 ಜನವರಿ 2004


### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಶನ್‌ನಲ್ಲಿ : | | |
| ದಿ ಟ್ರೆಮೊಲೋಸ್<br>ಬಿ.ವಿ. ಕಾರಂತೋತ್ಸವ<br>Forthcoming Programmes | • ರೇಖಾ ಎನ್. ವಿ. ಮತ್ತು ಸುಮಾದ್ವಾರಕನಾಥ್ | 2 |
| ಜೈವಿಕ ತಂತ್ರದಿಂದ ಮಾರ್ಪಡಿಸದ ಆಹಾರ ಪದಾರ್ಥಗಳು | • ಎಂ.ಪಿ.ಎನ್. ಪ್ರಸಾದ್ | 6 |
| ಬಿ.ವಿ. ಕಾರಂತರ ವಿವಿಧ ಮುಖಗಳು : ವಿಚಾರ ಸಂಕಿರಣ | • ಓಂದಾಸ್ ಕಣ್ಣಂಗಾರ್ | 8 |
| ಭಾರತೀಯ ಕಲೆ ಭಾಗ - 20 | | |
| ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ | | 10 |
| ಸುತ್ತ-ಮುತ್ತ | | 12 |


Rs. 5/-


The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

ಅಸೋಸಿಯೇಶನ್‌ನಲ್ಲಿ

## ದಿ ಟ್ರೆಮೊಲೋಸ್

ಅಕಾರ್ಡಿಯನ್ ಮುಖ್ಯವಾಗಿ ಒಂದು ಬಗೆಯ ಬದಿರಿನ ವಾದ್ಯ. ಇದಕ್ಕೆ ವಿಶೇಷವಾಗ ಹಾಗೂ ನಾವೀನ್ಯತೆಯ ವಿಸ್ತಾರವಿದೆ. ಒಬ್ಬ ಅಕಾರ್ಡಿಯನ್ ಪ್ರವೀಣನು ಸಂಗೀತದ ಮಾಯಾಜಾಲವನ್ನೇ ಸೃಷ್ಟಿಸ ಬಹುದು. ಒಂದು ಏಕವಾದ್ಯವಾಗಿಯೂ, ಕಚೇರಿಯಲ್ಲಿ ಇತರ ವಾದ್ಯಗಳೊಡನೆಯೂ ನುಡಿಸಬಹುದಾಗಿದೆ. ಹಿಂದೆ ಸಿನೆಮಾ ಸಂಗೀತದಲ್ಲಿ ಶಂಕರ ಜೈಕೀಷನ್ ಅವರು ಅಕಾರ್ಡಿಯನ್ ಅನ್ನು ಬಹಳ ಉತ್ತಮವಾಗಿ ಉಪ ಯೋಗಿಸಿಕೊಂಡಿದ್ದಾರೆ. ಆದರೆ ಇತರ ಸಂಗೀತ ನಿರ್ದೇಶಕರು ಅಕಾರ್ಡಿಯನ್ ಅನ್ನು ಪೂರ್ಣವಾಗಿ ಪ್ರಯೋಗಿಸಿಲ್ಲ.



ಬೆಂಗಳೂರಿನವರಾದ ಎಮ್. ಬಿ. ಪ್ರಕಾಶ್, ಪಿ. ರವೀಂದ್ರ ಹಾಗೂ ಸಂಜೀವ ದಾಸ್ ಮೋಹಪಾತ್ರ ಅಕಾರ್ಡಿಯನ್ ಬಗ್ಗೆ ಬಹಳ ಆಸಕ್ತಿ ಬೆಳಸಿಕೊಂಡಿದ್ದಾರೆ. ಅವರು ಐರೋಪ್ಯ ಜಾನಪದ ಸಂಗೀತವಾದ ಮ್ಯುಸೆಟ್ ವಾಲ್ಟ್ಜ್, ಪೋಲ್ಕಾಸ್, ತರನ್‌ತೆಲ್ಲಾಸ್, ಸ್ಕಾಂಡ್ಸರ್ಸ್ ಮುಂತಾದವರನ್ನು ಬಹಳ ಇಷ್ಟಪಡುತ್ತಾರೆ.

ಬೆಂಗಳೂರಿನಲ್ಲಿ ಅನೇಕಕಡೆ ತಮ್ಮ ವಾದ್ಯ ಗೋಷ್ಠಿಯನ್ನು ನಡೆಸಿ ಅನೇಕ ಪ್ರೇಕ್ಷಕ ವರ್ಗವನ್ನು ಬೆಳೆಸಿದ್ದಾರೆ. ಈ ವಾದ್ಯವನ್ನು ಜನಪ್ರಿಯಗೊಳಿಸಿ ಹೆಚ್ಚು ಹೆಚ್ಚು ಜನರು ಇದನ್ನು ನುಡಿಸುವಂತಾಗ ಬೇಕೆಂದು ಇವರು ಪ್ರಯತ್ನ ಪಡುತ್ತಿದ್ದಾರೆ. ಇದೇ ಕಾರಣಕ್ಕಾಗಿ ಅವರು ಡಿಸೆಂಬರ್‌ನಲ್ಲಿ ಮುಂಬೈಗೆ ಬಂದಿರುವರು.

''ದಿ ಟ್ರೆಮೊಲೋಸ್'' ತಂಡದ ಎಂ. ಬಿ. ಪ್ರಕಾಶ್ ಮತ್ತು ಪಿ. ರವೀಂದ್ರ ಅವರು ಡಿಸೆಂಬರ್ 3, 2003ರಂದು ಸಂಜೆ 7.30ಕ್ಕೆ ಮೈಸೂರು ಅಸೋಸಿಯೇಶನ್ನಿನಲ್ಲಿ ತಮ್ಮ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿದರು. ಅನೇಕ ಐರೋಪ್ಯ ಸಂಗೀತದ ಹಾಡುಗಳ ಜೊತೆಗೆ ಜಿ. ಪಿ. ರಾಜರತ್ನಂ ಅವರ ಕನ್ನಡ ಹಾಡು ಹಾಗೂ ರಾಜಕಪೂರ್ ಅವರ ಹಿಂದಿ ಚಲನ ಚಿತ್ರದ ಹಾಡನ್ನೂ ಅವರು ನುಡಿಸಿ ಸಭಿಕರನ್ನು ರಂಜಿಸಿದರು. ಜೊತೆಗೆ ಶ್ರೀ ಸಾಲ್ವನಾ ಅವರು ಒಂದು ಚಿರಪರಿಚಿತ ಇಂಗ್ಲೀಷ್ ಗೀತೆಯನ್ನು ಹಾಡಿ ಎಲ್ಲರನ್ನು ಮುದಗೊಳಿಸಿದರು. ಸಭೆಗೆ ಬಂದಿದ್ದ ಶಂಕರ್ ಜೈಕಿಷನ್‌ಅವರ ಅಸಿಸ್ಟೆಂಟ್ ಆಗಿದ್ದ ಸಾಠೆಯವರೂ ಸಹ ಕೆಲವು ರಾಜ್ ಕಪೂರ್ ಅವರವ ಚಲನ ಚಿತ್ರಗಳ ಗೀತೆಗಳನ್ನು ನುಡಿಸಿ ಸಭಿಕರ ಮನರಂಜಿಸಿದರು.

# ಬಿ.ವಿ. ಕಾರಂತೋತ್ಸವ

ಬಿ.ವಿ. ಕಾರಂತರು ರಾಷ್ಟ್ರೀಯ ರಂಗಭೂಮಿ ಕಂಡ ಅಪೂರ್ವ ಸವ್ಯಸಾಚಿಗಳಲ್ಲೊಬ್ಬರು. ಕರ್ನಾಟಕದ ರಂಗಭೂಮಿ ಪರಂಪರೆಯಲ್ಲಿ ತನ್ನದೇ ಛಾಪನ್ನು ಒತ್ತಿದ ಅವರ ಸಂಗೀತ ತನ್ನದೇ ಆದ ವಿಶಿಷ್ಟ ಶೈಲಿ ಹೊದಿದೆ ಎಂದು ಲೋಕಮತ್ ಪತ್ರಿಕಾ ಸಮೂಹದ ಮುಖ್ಯ ಸಂಪಾದಕರಾದ ಡಾ। ಅರುಣ್ ಟಿಕೇಕರ್ ಅಭಿಪ್ರಾಯ ಪಟ್ಟರು.



*ಬಿ.ವಿ. ಕಾರಂತ ನಾಟಕೋತ್ಸವದ ಉದ್ಘಾಟನೆಯಲ್ಲಿ ಬಿ. ಬಿ. ರಾವ್, ಮುಖ್ಯ ಅತಿಥಿ ಅರುಣ್ ಟಿಕೇಕರ್, ದೊರೆಸ್ವಾಮಿ ಮತ್ತು ಪ್ರಸಾದ್.*

ಮೈಸೂರು ಅಸೋಸಿಯೇಶನ್ ಕನ್ನಡ ಕಲಾಕೇಂದ್ರ, ದಿಲ್ಲಿಯ ಸಂಗೀತ ನಾಟಕ ಅಕಾಡೆಮಿ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜತೆಯಾಗಿ ಮಾಟುಂಗದ ಮೈಸೂರು ಎಸೋಸಿಯೇಶನಿನಲ್ಲಿ ಆಯೋಜಿಸಿರುವ 'ಶ್ರೀ ಬಿ.ವಿ. ಕಾರಂತ ನಾಟಕೋತ್ಸವ'ವನ್ನು ಉದ್ಘಾಟಿಸಿ ಮುಖ್ಯ ಅತಿಥಿ ಸ್ಥಾನದಿಂದ ಅವರು ಮಾತನಾಡುತ್ತಿದ್ದರು.



*ಆನಂದ್ ಭಟ್ ಮತ್ತು ಸಂಗಡಿಗರು ಕಾರಂತರ ನಾಟಕದ ಹಿಂದಿ ಹಾಡುಗಳನ್ನು ಹಾಡಿದರು.*

ಬದಲಾವಣೆ, ಆಧುನಿಕ ಪರಂಪರೆಯನ್ನು ನಾಟಕಗಳಲ್ಲಿ ಮೈಗೂಡಿಸಿಕೊಂಡು ವಾಸ್ತವಿಕ ಜನಜೀವನದ ಮೌಲ್ಯಗಳನ್ನು ಚಿತ್ರಿಸುವ ವಿಶೇಷತೆಗಳನ್ನು ಕಾರಂತರ ನಾಟಕಗಳಲ್ಲಿ ಕಾಣಬಹುದು. ಕಲೆ, ಸಂಸ್ಕೃತಿ, ಸಂಸ್ಕಾರಗಳ ತವರೂರು ಕರ್ನಾಟಕ ಈಗಾಗಲೇ 7 ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿದ್ದು ಅಲ್ಲಿಯ ಜನರ ಕಲಾಭಿರುಚಿಯನ್ನು ಪ್ರದರ್ಶಿಸುತ್ತದೆ ಎದು ತಿಳಿಸಿದ ಡಾ। ಅರುಣ್ ಟಿಕೇಕರ್ ಸಂಸ್ಕೃತಿ ಸಂಸ್ಕಾರ ಅದಾನ ಪ್ರದಾನ ಅನ್ಯ ಭಾಷಿಯರೊಂದಿಗೆ ಆಗಬೇಕೆಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಮೈಸೂರು ಅಸೋಸಿಯೇಷನ್ ಅಧ್ಯಕ್ಷ ದೊರೆಸ್ವಾಮಿ ಸ್ವಾಗತಿಸುತ್ತಾ ಕನ್ನಡ ರಂಗಭೂಮಿಗೆ ಶ್ರದ್ಧಾಂಜಲಿಗಾಗಿ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮುಂದೆಯೂ ಕೂಡ ಪ್ರಖ್ಯಾತ ರಂಗ ನಿರ್ದೇಶಕ, ನಾಟಕಕಾರರ ನಾಟೋತ್ಸವವನ್ನು ಮೈಸೂರು ಅಸೋಸಿಯೇಶನ್ ಪ್ರದರ್ಶಿಸಲಿಕ್ಕಿದೆ ಎಂದು ತಿಳಿಸಿದರು.

ಪರಿಚಯ ಮತ್ತು ಪ್ರಸ್ತಾವನೆಗೈದ ಅಸೋಸಿಯೇಶನಿನ ಕಾರ್ಯದರ್ಶಿ ಎಂ.ವಿ.ಎನ್. ಪ್ರಸಾದ್ ಅವರೂ ಬಿ.ವಿ. ಕಾರಂತರು ಬಹುಮುಖ ಪ್ರತಿಭೆಯ ವ್ಯಕ್ತಿ ಕರ್ನಾಟಕದ ರಂಗಾಯಣ ಅವರ ಕನಸಿನ ಕೂಸು, ಹಿಂದಿ, ಪಂಜಾಬಿ, ಅಸ್ಸಾಮಿ ಮತ್ತು ಗುಜರಾತಿ ನಾಟಕಗಳಿಗೆ ನಿರ್ದೇಶಿಸಿ ಕಾರಂತರು ಭಾರತ ರಂಗಭೂಮಿಯ ದಿಗ್ಗಜರಲ್ಲಿ ಒಬ್ಬರು ಎಂದು ತಿಳಿಸಿದರು.

ಭಾರತಿ ಪ್ರಸಾದ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು.

ನಿರೂಪಣೆಯನ್ನು ಅಹಲ್ಯಾ ಬಲ್ಲಾಳ್ ನಿರ್ವಹಿಸಿದರೆ ವಂದನಾರ್ಪಣೆಯನ್ನು ಮುಂಬೈ ಕನ್ನಡ ಕಲಾ ಕೇಂದ್ರದ ಉಪಾಧ್ಯಕ್ಷ ಬಾಲಚಂದ್ರ ರಾವ್ ಮಾಡಿದರು.

ಅನಂತರ ಬಿ.ವಿ. ಕಾರಂತರ ಬಗ್ಗೆ ಕಿರುಚಿತ್ರ ಮತ್ತು ಛಾಯಾ ಚಿತ್ರ ಪ್ರದರ್ಶನ ಮತ್ತು ಅಮೋದ್ ಭಟ್ ಮತ್ತು ತಂಡದವರಿಂದ ಕಾರಂತ ರಂಗ ಸಂಗೀತ ಏರ್ಪಡಿಸಿದ್ದವು. ಐದು ದಿನಗಳಲ್ಲಿ ಮಾಟುಂಗದ ಮೈಸೂರು ಅಸೋಸಿಯೇಷನ್‌ನಲ್ಲಿ ಹಮ್ಮಿಕೊಂಡ ನಾಟಕೋತ್ಸವದಲ್ಲಿ ಬಿ.ವಿ. ಕಾರಂತರು ನಿರ್ದೇಶಿಸಿರುವ 'ಸೇವಂತಿ', 'ಕತ್ತಲೆ ಬೆಳಕು', 'ಜೋಕುಮಾರ ಸ್ವಾಮಿ', 'ಹಯವದನ' ನಾಟಕ ಪ್ರದರ್ಶನಗೊಂಡಿತು.

## ನಾಟಕೋತ್ಸವ... ವಿಮರ್ಶೆ

ದಕ್ಷಿಣ ಕನ್ನಡ ಜಿಲ್ಲೆಗೆ ಮರೆಯಲಾರದಂಥ ಇಬ್ಬರು ಕಾರಂತರನ್ನು ನೀಡಿದೆ ಹೆಮ್ಮೆ ಇದೆ. ಶಿವರಾಮ ಕಾರಂತರು ನಿಂತಲ್ಲಿಯೇ ಸೃಜನ ಶೀಲರಾಗುತ್ತಾ



*ಸೇವಂತಿ ನಾಟಕದ ದೃಶ್ಯ.*

ಹೋದಂತೆ, B.V. ಕಾರಂತರು, ದೊರಕಿದ ಅವಕಾಶಗಳಿಂದ ಬೆಳೆಯುತ್ತಲೇ ಹೋಗಿರುವುದನ್ನು ನಾವೆಲ್ಲರೂ ಕಂಡಿದ್ದೇವೆ. ಇಂಥ ಕಾರಂತರ ನೆನಪಿನಲ್ಲಿ ಉತ್ಸವ ಏರ್ಪಡಿಸಿದವರು ಮುಂಬೈನ ಮೈಸೂರು ಅಸೋಸಿಯೇಷನ್ ಕನ್ನಡ ಕಲಾ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ದೆಹಲಿಯ ಸಂಗೀತ ನಾಟಕ ಅಕಾಡೆಮಿ

ಡಿ. 11 ರಿಂದ 16, 2003ರ ವರೆಗೆ ನಡೆದ ಉತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಮುಂಬೈ ಕನ್ನಡಿಗನದಾಗಿತ್ತು. ಬೆಂಗಳೂರು ನಾಟಕ ತಂಡವರು ಕನ್ನಡ ರಂಗ ಭೂಮಿಯಲ್ಲಿ ಕಾರಂತರ ನೆನಪನ್ನು ಜೀವಂತವಾಗಿಡುವ ಪ್ರಯತ್ನವೂ ಅಭಿನಂದನಾರ್ಹ. 27 ವರ್ಷಗಳ ಇತಿಹಾಸವಿರುವ ಈ ತಂಡ ಕಾರಂತರ ರಂಗಗೀತೆಗಳ ಧ್ವನಿ ಮುದ್ರಿಕೆ ಮತ್ತು ಕಾರಂತ ನಿರ್ದೇಶನದ ನಾಟಕಗಳನ್ನು ದೇಶಾದ್ಯಂತ ತಲುಪಿಸುವ ಆರು ತಿಂಗಳಿಗೊಮ್ಮೆ ಹೊಸ ನಾಟಕದ ಹೊಣೆಹೊತ್ತಿದೆ.

ಅವರ Hit show ಗಳಾದ ಸತ್ತವರ ನೆರಳು, ಜೋಕುಮಾರ ಸ್ವಾಮಿ, ಹಯವದನ ನಾಟಕಗಳನ್ನು ಕ್ರಮವಾಗಿ 250, 125, 75 ಪ್ರದರ್ಶನಗಳನ್ನು ನೀಡಿದ ಹೆಮ್ಮೆ ತಂಡಕ್ಕಿದೆ. ಈ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಿದ ತಂಡದ ರೂವಾರಿಗಳಲ್ಲಿ ಉಳಿದಿರುವವರು. T.S. ನಾಗಾಭರಣ ಹಾಗೂ ಸುಂದರರಾಜ್, ಡಿ. 11ರ ಉದ್ಘಾಟನೆಯ ನಂತರ ಆರಂಭದ ನಾಟಕವಾಗಿ ಮಂಡ್ಯದ ಗೆಳೆಯರ ಬಳಗ ಪ್ರಸ್ತುತ ಪಡಿಸಿದ ನಾಟಕ 'ಸೇವಂತಿ' (ಪಿಗ್ಮೇಲಿಯನ್‌ನ ಕನ್ನಡ ರೂಪಾಂತರ



*ಕತ್ತಲೆ ಬೆಳಕು ನಾಟಕದ ಒಂದು ದೃಶ್ಯ.*


**THE MYSORE ASSOCIATION, BOMBAY**

**FORTH COMING PROGRAMMES**

| Date | Programme | Time | Venue |
|---|---|---|---|
| 8th Jan 2004 | Visit of Swamiji from Parakalaswamy Mutt, Mysore | 6.00pm | Gr. Floor |
| 11th Jan 04 | Sankashti Pooja | 7.00 pm | Gr. Floor |
| 13th Jan 04 | Ganesha Pooja & Sahasranaamaarchana | 7.00 pm<br>7.00pm | Gr. Floor<br>Gr. Floor |
| 16th Jan 04 | Mysore Association Golden Jubilee Endowment Lectures on & "Master Mind in Maharashtra" | 7.00 pm | Conf. Hall |
| 17th Jan 04 | by Mattur Krishna Murthy Director Bharatiya Vidya Bhavan & M. P. Birla Foundation | 5.30 pm | |
| 20th Jan 04 | Ganesha Pooja & Sahasranaamaarchana | 7.00 pm<br>7.00 pm | Gr. Floor<br>Gr. Floor |
| 25th Jan 04 Pooja & | Maaghi Ganapati Satya Narayana Pooja | 4.00 pm | Gr. Floor |
| 27th Jan 04 | Ganesha Pooja & Sahasranaamaarchana | 7.00 pm | Gr. Floor |
| February Programmes | Adya Rangacharya Birth Centenary Celebrations, Natakotsava with Hindi, Marathi, Kannada & English plays, a seminar on 'Shreeranga' Exibitions of Photographs. Details will be announced later. | | |



FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For

INDIAN AIRLINES & JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750



*ಜೋಕುಮಾರ ನಾಟಕದ ದೃಶ್ಯ.*

ಜಯಂತ ಕಾಯ್ಕಿಣಿ) ಯುವ ಪೀಳಿಗೆಯನ್ನು ಪ್ರೋತ್ಸಾಹಿಸುವ ಸಲುವಾಗಿ, ಕಾಲೇಜು ವಿದ್ಯಾರ್ಥಿಗಳ ತಂಡವನ್ನು ತರಬೇತಿಗೊಳಿಸಿರುವುದು ಅಭಿನಂದ ನಾರ್ಹ. ಪ್ರಯೋಗದಲ್ಲಿ ಎಳೆತನವಿದ್ದರೂ ಕಾರಂತರ ರಂಗ ಸಂಗೀತ ಪ್ರೇಕ್ಷಕರನ್ನು ರಂಜಿಸಿತು.

ಮಿಕ್ಕ ಮೂರು ನಾಟಕಗಳು ಶ್ರೀರಂಗರ 'ಕತ್ತಲೆ - ಬೆಳಕು' ಕಂಬಾರರ 'ಜೋಕುಮಾರ ಸ್ವಾಮಿ', ಗಿರೀಶ ಕಾರ್ನಾಡರ 'ಹಯವದನ' ಬೆ.ನ.ಕ ತಂಡದವರು ನೀಡಿದ ಪ್ರಯೋಗಗಳಾಗಿತ್ತು. ರಂಗಗೀತೆಗಳಿಲ್ಲದ, ಶಕ್ತಿಯುತವಾದ ಸಂಭಾಷಣೆಯ ಕತ್ತಲೆ - ಬೆಳಕು ಪ್ರದರ್ಶನದಲ್ಲಿ ಸೋತಿತ್ತು. ಬೆಂಗಳೂರಿನ ಕಲಾವಿದರಿಗೆ ಉತ್ತರ ಕರ್ನಾಟಕದ ಭಾಷೆಯ ಪ್ರಯೋಗ ಕಬ್ಬಿಣದ ಕಡಲೆಯೇ. ಈ ಒಟ್ಟು ನಾಟಕದಲ್ಲಿ ಪ್ರೇಕ್ಷಕರ ಗಮನ ಸೆಳೆದವರೆಂದರೆ ದೇಶಾವರಿ ನಗೆ ಬೀರುತ್ತಿದ್ದ ಕಂಪನಿ ಮ್ಯಾನೇಜರ್ ಒಬ್ಬರೇ. ಮರಾಠಿರಂಗ ಭೂಮಿಯ ನಿಕಟ ಸಂಪರ್ಕಹೊಂದಿರುವ ಮುಂಬೈ ಪ್ರೇಕ್ಷಕರಿಗೆ ಪ್ರದರ್ಶನ ತಾಳೆ ಹಾಕಿರುವುದೂ ಒಂದು ರೂಢಿ ಆಗಿಬಿಟ್ಟಿದೆ.

ಭಾನುವಾರ ಸಂಜೆ ರಂಗಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಸುಂದರ ರಾಜ್ ಹಾಗೂ ಕಲ್ಪನಾ ನಾಗನಾಥ್ ಅವರ ಸುಶ್ರಾವ್ಯ ಕಂಠದಿಂದ ಕಾರಂತಲೋಕಕ್ಕೆ ಪ್ರೇಕ್ಷಕರನ್ನು ಒಯ್ದಿದ್ದರು.

ರಂಗಗೀತೆಯ ಗುಂಗಿನಿಂದ ಹೊರಬರಲು ಮೂಡಿಬಂದ ಕಾರ್ಯಕ್ರಮವೇ ಕಾರಂತರ ವಿವಿಧ ಮುಖಗಳನ್ನು ಪರಿಚಯಿಸುವ ವಿಚಾರ ಸಂಕಿರಣ.

ಮಾಮೂಲಿನಂತೆ, ಗೊತ್ತು ಪಡಿಸಿದ ವಕ್ತಾರರ ಗೈರು ಹಾಜರಿಯಲ್ಲಿ ತಂಡದ ನಟರೆ ನಡೆಸಿಕೊಡ ಬೇಕಾಗಿದ್ದುದು ಅನಿ ವಾರ್ಯತೆ. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಗಣೇಶ ಉಪಾಧ್ಯರ ಪೂರ್ವ ನಿಯೋಜಿತ ಸಂದರ್ಶನ, ಚರ್ಚೆಯಾಗದೆ ಅನುಭವ ಕಥನವಾಗಿ ಮೂಡಿಬಂದಿತು. ಕಾರಂತರ ಗರಡಿಯಲ್ಲಿ ಪಳಗಿದ, T.S. ನಾಗಾಭರಣ, ಸುಂದರರಾಜ್, ಕಲ್ಪನಾನಾಗ ನಾಥ್, ಸಿಂಗ್, ಕಾರಂತರ ಒಡನಾಟದ ತಮ್ಮ ಅನುಭವದ ಬುತ್ತಿ ಯನ್ನು ಬಿಚ್ಚಿದರೆ, ಮುಂಬಯಿ ಪ್ರತಿನಿಧಿಗಳಾಗಿ ಮುಂಬೈ ನಾಟಕಲೋಕದ ಭೀಷ್ಮ ಮಂಜುನಾಥ'ಯ್ಯ ಕಾರಂತರ ವೈಭವೀಕರಣಕ್ಕೆ ಪುಷ್ಟಿ ಕೊಟ್ಟರು. ಕಾರಂತರ ವ್ಯಕ್ತಿತ್ವ ವನ್ನು ಪ್ರಭಾವವನ್ನು ಮೀರಿ ಬರುವಂತಹ ನವಶಕ್ತಿಯ ಅನ್ವೇಷಣೆಯ ಸಾಧ್ಯತೆಯ ಬಗ್ಗೆ ಭರತ್‌ಕುಮಾರ್ ಪೊಲಿಪು ರವರು ತಮ್ಮ ಆಶಯ ವ್ಯಕ್ತ ಪಡಿಸಿದರು.



*ಹಯವದನ ನಾಟಕದ ದೃಶ್ಯ.*

ಮುಂದಿನ ಎರಡು ನಾಟಕಗಳು ''ಜೋಕುಮಾರ ಸ್ವಾಮಿ'', ''ಹಯವದನ'' ತುಂಬಿದ ಸಭಾಗೃಹದಲ್ಲಿ ಪ್ರಯೋಗಿಸಲ್ಪಟ್ಟಿತು. ಎಲ್ಲರಿಗೂ ಹುಚ್ಚು ಹಿಡಿಸಿದ ರಂಗಗೀತೆಗಳ ಗೇಯತೆ, ದೃಶ್ಯ ಸಂಯೋಜನೆಯ ವೈಭವ ಕಾರಂತ ಉತ್ಸವದ Nostalgia ಪ್ರೇಕ್ಷಕರಿಗೆ ಮುದ ನೀಡಿತೆನ್ನುವುದರಲ್ಲಿ ಸಂಶಯವಿಲ್ಲ. ಕಲಾವಿದ ಮಂಜುನಾಥ ಬಸ್ಯನಾಗಿ, ಕಪಿಲನಾಗಿ ಪ್ರೇಕ್ಷಕರ ಮನಗೆದ್ದರು. T.S. ನಾಗಾಭರಣ, ಸುಂದರರಾಜ್ ಅವರ ಪ್ರೌಢ ಅಭಿನಯದಲ್ಲಿ ತಂಡದ ಅನುಭವ ಸಾಕಾರಗೊಂಡಿತ್ತು, ಗುರ್‍ಯಾ ಪಾತ್ರದ.. ಭರವಸೆಯ ನಟನಾಗಿ ರಂಗದ ಮೇಲೆ ಮಿಂಚಿದ. ಕಲ್ಪನಾನಾಗನಾಥ್ ಅವರ ಕಂಠಶ್ರೀ ಮುಂಬೈ ಪ್ರೇಕ್ಷಕರ ಮನ ಮನೆ ತಲುಪಿತು. ಗೌಡಿತಿಯ ಪಾತ್ರದಲ್ಲಿ ಶೋಭಾ ರಾಘವೇಂದ್ರ ಪಾತ್ರಕ್ಕೆ ನ್ಯಾಯ ಸಲ್ಲಿಸಿದರೆನ್ನಬಹುದು. ಒಟ್ಟಿನಲ್ಲಿ ಕಾರಂತ ಉತ್ಸವ ರೂಪದ ನೆನಪು ಮನದಲ್ಲಿ ಉಳಿಯುವಂಥದ್ದು.

***

ಕಾರಂತ ನಾಟಕೋತ್ಸವ ಹೈದರಾಬಾದಿನ 'ಸುರಭಿ'



*ಜೋಕುಮಾರ ನಾಟಕದ ದೃಶ್ಯ.*

ತಂಡ ಸಾದರ ಪಡಿಸಿದ 'ಚಂಡಿ ಪ್ರಿಯ' ತೆಲುಗು ನಾಟಕ ಪ್ರದರ್ಶನದಿಂದ ಮುಕ್ತಾಯಗೊಂಡಿತು. ನಾಟಕ ಪ್ರದರ್ಶನವನ್ನು ಚೆಂಬೂರಿನ ಫೈನ್ ಆರ್ಟ್ಸ್‌ನಲ್ಲಿ ಸೊಸೈಟಿಯಲ್ಲಿ ಏರ್ಪಡಿಸಲಾಗಿತ್ತು ಉತ್ಸವದಲ್ಲಿ ಈ ಮೊದಲು ಪ್ರದರ್ಶಿತಗೊಂಡ ನಾಲ್ಕು ಕನ್ನಡ ನಾಟಕಗಳು ಹವ್ಯಾಸಿ ರಂಗಭೂಮಿಯ ಸತ್ವಗಳನ್ನು ಬಿತ್ತರಗೊಳಿಸಿದ್ದರೆ. 'ಚಂಡಿಪ್ರಿಯ' ತೆಲುಗು ನಾಟಕ ಕಂಪನಿ ನಾಟಕದ ದಟ್ಟ ಅನುಭವ ಮಾಡಿಕೊಟ್ಟಿತು. ಕರಿಮಲ್ಲ ರಾಮಮೂರ್ತಿ ರಚಿಸಿರುವ 'ಚಂಡಿಪ್ರಿಯ' ನಾಟಕ ಕಾರಂತರು ನಿರ್ದೇಶಿಸಿರುವ ಏಕೈಕ ತೆಲುಗು ನಾಟಕ. ನಾಟಕದ ವಸ್ತು ಎಂದಿನ ರಾಜ -ಮಹಾರಾಜರ ಕಥೆಯಂತಿದ್ದರೂ ನಾಟಕ ಆಶಯ ಮತ್ತು ಸಂದೇಶ ಸಮಕಾಲೀನ ಸಮಾಜ ತಲುಪುವಂತಿದ್ದು ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿತು.

'ಚಂಡಿಪ್ರಿಯ', ಲಿಂಗಭೇದ ಮತ್ತು ತಾರತಮ್ಯತೆ ಯನ್ನು ತನ್ನ ಸ್ವಾಭಿಮಾನದಿಂದ ಅಳಿಸಿ ಸ್ತ್ರೀ



*ಹಯವದನ ನಾಟಕದ ದೃಶ್ಯ.*

ಸಮಾನತೆಯನ್ನು ರೂಪಿಸಿ ವಿಜೃಂಭಿಸಿದ 'ಚಂಡಿಪ್ರಿಯ' ಎಂಬ ರಾಜಕುಮಾರಿಯ ಕಥೆ, ಮಿಥಿಲೆಯ ರಾಜನ ಮಗಳಾದರೂ ಮಗಳನ್ನು ನಿರಾಕರಿಸಿ ಪುತ್ರಸಂತಾನಕ್ಕೆ ಹಾತೊರೆಯುವ ತಂದೆಯ ಕೋಪ - ಅನಾದರಕ್ಕೆ ಪಾತ್ರಳಾದ ಚಂಡಿಪ್ರಿಯ ಮಹಾಮಂತ್ರಿಯ ಹಲವಾರು ಹೆಣ್ಣು ಮಕ್ಕಳೊಂದಿಗೆ ಅವನ ಸಾಕುಮಗಳಾಗಿ ಬೆಳೆಯುತ್ತಾಳೆ.

ರಾಜಾಜ್ಞೆಯಂತೆ ಹೆಣ್ಣು ಮಗುವಿನ ತಲೆಕಡಿಯಲು ಮಂತ್ರಿ ಮತ್ತು ದಂಡನಾಯಕರು ಹೋದಾಗ ಎತ್ತಿದ ಕತ್ತಿ ಮಾಯವಾಗಿ ಚಂಡಿದೇವಿಯ ಅಶರೀರವಾಣಿ ಯಾಗುತ್ತದೆ. ಚಂಡಿಗೆ ಪ್ರಿಯಳಾದ ಈ ಮಗು 'ಚಂಡಿ ಪ್ರಿಯ' ಎಂಬ ಹೆಸರನ್ನು ಹೊಂದುತ್ತಾಳೆ. ಮಹಾ ಮಂತ್ರಿಯ ಆಶ್ರಯದಲ್ಲಿ ಧೀರಳಾಗಿ ಶೂರಳಾಗಿ, ಬುದ್ಧಿವಂತಳಾಗಿ ಬೆಳೆಯುವ ಚಂಡಿಪ್ರಿಯ ಯಾವ ರಾಜಕುಮಾರನಿಗೂ ಕಡಿಮೆಯಿರದಂತೆ ಧನುರ್ವಿದ್ಯೆ, ಕತ್ತಿವರಸೆಗಳಲ್ಲಿ ಪ್ರಾಮುಖ್ಯತೆ ಹೊಂದುತ್ತಾಳೆ.



*ತೆಲುಗು ನಾಟಕ ಚಂಡಿಪ್ರಿಯದ ಒಂದು ದೃಶ್ಯ.*

ತಂದೆಯ ನಿರ್ಲಕ್ಷ್ಯ ಕೋಪಕ್ಕೆ ಮಣಿಯದೆ ಎದುರು ನಿಲ್ಲುವ ಚಂಡಿಪ್ರಿಯ ಆತ್ಮಾಭಿಮಾನದಿಂದ ಬೆಳೆಯುತ್ತಾಳೆ.

ಕಾಶೀ ರಾಜನ ಅಸ್ಥಾನದಲ್ಲಿ 'ಚಂಡಿದಾಸ'ನೆಂಬ ಹೆಸರನ್ನು ಹೊಂದಿ ಪುರುಷ ರೂಪದಲ್ಲಿ ಮಂತ್ರಿ ಪದವಿಯನ್ನು ಅಲಂಕರಿಸುವ ಚಂಡಿಪ್ರಿಯ ಪ್ರಜೆಗಳ ಸಮಸ್ಯೆಗಳನ್ನು ಜಾಣತನದಿಂದ ಬಗೆ ಹರಿಸಿ ರಾಜನ ಮೆಚ್ಚುಗೆ ಗಳಿಸುತ್ತಾಳೆ. ಕಾಶಿ ರಾಜನ ನೆರವನ್ನು ಕೋರಿ ಬಂದ ತಂದೆಯನ್ನು ಶತ್ರುವಿನ ಸೆರೆಯಿಂದ ಬಿಡಿಸುವ ಚಂಡಿಪ್ರಿಯ ತನ್ನನ್ನು ಅಲಕ್ಷಿಸಿ ದ್ವೇಷಿಸಿದ ತಂದೆಯ ಪ್ರೀತಿ ವಿಶ್ವಾಸಗಳಿಸುತ್ತಾಳೆ. ತಕ್ಕ ವಿದ್ಯಾಭ್ಯಾಸವನ್ನು ಮಗನಿಗೆ ಕೊಡಿಸದೆ ಮಂದಬುದ್ಧಿಯವನನ್ನಾಗಿಸಿದ ತಂದೆಯನ್ನು ಹೀಯಾಳಿಸಿ ವಿದ್ಯೆಯ ಮಹತ್ವದ ಮಾತನಾಡುವ ಚಂಡಿಪ್ರಿಯ ತನ್ನ ವಾಕ್ಚಾತುರ್ಯ ಸಾಮರ್ಥ್ಯಗಳಿಂದ ತಂದೆಯ ಒಲುಮೆಗೆ ಪಾತ್ರವಾಗಿ ಮಿಥಿಲೆಯ ಸಿಂಹಾಸನವನ್ನೇರುತ್ತಾಳೆ. ತಾನು ವೇಷ ಮರೆಸಿಕೊಂಡು ಮಂತ್ರಿ ಯಾಗಿದ್ದ ಕಾಶೀ ರಾಜಕುಮಾರನನ್ನು ಮದುವೆಯಾಗುತ್ತಾಳೆ. ನಾಟಕದ ವಸ್ತು ನೇರ, ಸರಳ ಸಾಮಾನ್ಯ ಎನಿಸಿದರೂ ನಾದಮಯವಾದ ತೆಲುಗು ಭಾಷೆಯಲ್ಲಿನ ಅರ್ಥಪೂರ್ಣ ಸಂಭಾಷಣೆಗಳು ಲೈಂಗಿಕ ಸಮಾನತೆ, ಸಮಾನ ಅವಕಾಶ ವಿದ್ಯಾಭ್ಯಾಸದ ಮಹತ್ವವನ್ನು ಅರಿವು ಮಾಡಿಕೊಡುವಂತಿತ್ತು.

ಸೀನರಿಗಳ ಬಳಕೆ, ವೇಷ, ಭೂಷಣಗಳು, ರಂಗದ ಮೇಲೆ ಚಮತ್ಕಾರಗಳು, ಹಾವಭಾವ, ಚಲನವಲನಗಳು ಅಪರೂಪವಾಗುತ್ತಿರುವ ಕಂಪನಿ ನಾಟಕವನ್ನು ನೆನಪು ಮಾಡಿಕೊಟ್ಟಿತು. ಒಂದೇ ಕುಟುಂಬದ ಮೂವತ್ತಕ್ಕೂ ಮೀರಿದ ಎಲ್ಲ ವಯಸ್ಸಿನ ನಟವರ್ಗವನ್ನು ಹೊಂದಿರುವುದು 'ಸುರಭಿ' ತಂಡದ ವಿಶೇಷ. ಚಂಡಿಪ್ರಿಯಳ ಪಟ್ಟಾಭಿಷೇಕ, ಮದುವೆಯಂತಹ ಸನ್ನಿವೇಶಗಳಲ್ಲಿ ಕಾರಂತರ ಪ್ರಭಾವ ಗಮನಕ್ಕೆ ಬಂದರೂ ಕಾರಂತರ ಛಾಪನ್ನು ನಾಟಕದಲ್ಲಿ ಹುಡುಕಿ ಹೊರಟ ಪ್ರೇಕ್ಷಕರ ಮನ ತುಂಬಿ ಕೊಂಡಿದ್ದು ಮೂಲದ ಗುಬ್ಬಿ ಕಂಪೆನಿಯ ಕಾರಂತರೇ !!

-ರೇಖಾ ಎನ್. ವಿ. ಮತ್ತು ಸುಮಾದ್ವಾರಕನಾಥ್



*ತೆಲುಗು ನಾಟಕ ಚಂಡಿಪ್ರಿಯದ ಒಂದು ದೃಶ್ಯ.*

## ಹೊಸ ವರ್ಷಕ್ಕೆ ಸ್ವಾಗತ

ಪ್ರತಿವರ್ಷದಂತೆ ಈ ವರ್ಷ ಡಿಸೆಂಬರ್ 31ರಂದು ಅಸೋಸಿಯೇಷನ್‌ನಲ್ಲಿ ಬರಲಿರುವ ಹೊಸ ವರ್ಷಕ್ಕೆ ಸ್ವಾಗತ ಕೋರಲು ಕಾರ್ಯಕ್ರಮನ್ನು ಆಯೋಜಿಸಲಾಗಿದ್ದು ಈ ವರ್ಷದ ವಿಶೇಷವೆಂದರೆ ಶ್ರೀಮತಿ ಚಿತ್ರಾ ಆನಂತ್ ಮತ್ತು ಸಂಗಡಿಗರ ಆರ್ಕೆಸ್ಟ್ರಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಜೆ 7-00ರಿಂದ 9.00ರ ವರೆಗೆ ಅವರು ನೆರೆದ ಸಭಿಕರನ್ನು ಹಳೆಯ ಹಿಂದಿ ಚಲನ ಚಿತ್ರದ ಹಾಡುಗಳಿಂದ ರಂಜಿಸಿದರು. ನಂತರ ಸೊಗಸಾದ ಊಟವಿತ್ತು. ಊಟವಾದ ನಂತರ 10.30ರಿಂದ 12.00ರ ವರೆಗೆ ಹೌಸಿ, ಲಕ್ಕಿಡಿಪ್, ಮುಂತಾದ ಆಟಗಳನ್ನು ಆಡಿಕೊಂಡು ಸರಿಯಾಗಿ 12.00 ಹೊಡೆದ ಸಮಯಕ್ಕೆ ಹೊಸ ವರ್ಷಕ್ಕೆ ಸ್ವಾಗತವನ್ನ ಕೋರುತ್ತ ಒಬ್ಬರಿಗೊಬ್ಬರು ಶುಭಾಶಯಗಳನ್ನು ಹೇಳುತ್ತಾ ಸದಸ್ಯರು ವಿರಮಿಸಿದರು.

# ಜೈವಿಕ ತಂತ್ರದಿಂದ ಮಾರ್ಪಡಿಸದ ಆಹಾರ ಪದಾರ್ಥಗಳು

✍ ಎಂ.ವಿ.ಎಸ್. ಪ್ರಸಾದ್

ಡಿಸೆಂಬರ್ ೦೭, ೨೦೦೩ರಂದು, ಕನ್ನಡ ಸಂಘ, ಅಣುಶಕ್ತಿ ಕೇಂದ್ರ ಮತ್ತು ಮೈಸೂರು ಅಸೋಸಿಯೇಷನ್ ಜೊತೆಗೂಡಿ, ೧೩ನೆಯ ರಾಷ್ಟ್ರೀಯ ವಿಜ್ಞಾನ ಸಂಕಿರಣದ ಅಂಗವಾಗಿ "ಮಾನವ ಕಲ್ಯಾಣಕ್ಕೆ ಜೈವಿಕ ತಂತ್ರಜ್ಞಾನ" ಎಂಬ ವಿಷಯದ ಬಗ್ಗೆ ಒಂದು ವಿಚಾರ ಗೋಷ್ಠಿಯನ್ನು, ಮೈಸೂರು ಅಸೋಸಿಯೇಷನ್ನಿನ ಸಭಾಗಾರದಲ್ಲಿ ನಡೆಸಿದರು.
ಈ ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧವನ್ನು ನೇಸರುವಿನ ಓದುಗರಿಗೋಸ್ಕರ ಇಲ್ಲಿ ಪ್ರಕಟಿಸಿದ್ದೇವೆ.

ಇಂದು, ವಿಶ್ವದಲ್ಲಿ ಯಾವುದೇ ಒಂದು ಪ್ರಗತಿಶೀಲ ದೇಶದ ಸೂಪರ್ ಮಾರ್ಕೆಟ್ಟನ್ನು ನಾವು ಪ್ರವೇಶಿಸಿದರೂ, ಅಲ್ಲಿ ಕಾಣುವ ದೃಶ್ಯವೇನೆಂದರೆ ಟೊಮ್ಯಾಟೊ, ಸೋಯಾಬೀನ್ಸ್, ಜೋಳ, ಆಲೂಗೆಡ್ಡೆ ಇತ್ಯಾದಿಗಳನ್ನು ಆಕರ್ಷಕವಾಗಿ ಜೋಡಿಸಿಟ್ಟಿರುತ್ತಾರೆ. ಇವುಗಳ ವಿಶೇಷವೇನೆಂದರೆ, ಇವುಗಳನ್ನು ಜೈವಿಕ ತಂತ್ರವನ್ನು ಬಳಸಿ, ರುಚಿ, ಬಣ್ಣ, ಕ್ರಿಮಿ ಕೀಟಗಳ ದಾಳಿಯನ್ನು ತಡೆಯುವ ಶಕ್ತಿ, ಕೆಡದಂತೆ ದೀರ್ಘಕಾಲ ಅಂಗಡಿಯಲ್ಲಿ ಉಳಿಯುವ ಶಕ್ತಿ, ಇತ್ಯಾದಿ ಗುಣಗಳನ್ನು ಹೆಚ್ಚಿಸಲಾಗಿದೆ.

ಇಂದು ನಾವು bio-engineered ಅಥವಾ Genetically Modified food ಅನ್ನುವ ಪದಗಳನ್ನು ಹೆಚ್ಚು ಹೆಚ್ಚು ಕೇಳುತಿದ್ದೇವೆ. ಹಾಗೆಂದರೇನು?

Genetically Modified (GM) food ಅಥವಾ bio-engineered ಅಂದರೆ, ಆ ಬೆಳೆಯ ಗುಣಗಳನ್ನು ಜೈವಿಕ ವಿಜ್ಞಾನದ ತಂತ್ರಗಳ ಸಹಾಯದಿಂದ ಮಾರ್ಪಡಿಸಲಾಗಿದೆ ಎಂದು ಅರ್ಥ.

ಆದಿಕಾಲದಿಂದ ಮಾನವನು ಅವನು ಬೆಳೆಯುವ ಬೆಳೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಮಾಡುತ್ತಾ ಬಂದಿದ್ದಾನೆ. ಇದಕ್ಕೆ ಅವನು ಬಳಸುತ್ತಿದ್ದ ವಿಧ ಕಸಿಕಟ್ಟುವುದು. ಇದರಲ್ಲಿ ಎರಡು ವಿಧವಾದ ಗುಣಗಳುಳ್ಳ, ಒಂದೇ ರೀತಿಯ ಎರಡು ಸಸ್ಯಗಳನ್ನು ಸೇರಿಸಿ ಬೆಳೆಸಿದಾಗ, ಅವೆರಡು ಸಸ್ಯಗಳ ಮುಖ್ಯ ಗುಣಗಳು ಈ ರೀತಿ ಬೆಳೆಸಿದ ಸಸ್ಯಕ್ಕೆ ಅಥವಾ ಅದರಿಂದ ಹುಟ್ಟಿದ ಸಸ್ಯಕ್ಕೆ ಬರುತ್ತದೆ. ಆದರೆ, ಈ ರೀತಿಯ ಕಸಿ ಮಾಡುವುದರಲ್ಲಿ, ಬೇಕಾದ ಗುಣಗಳೊಡನೆ, ಅನ್ಯ ಬೇಡದ ಗುಣಗಳೂ ಬರುತ್ತಿದ್ದವು. ಆದ್ದರಿಂದ, ಈ ಬೇಡದ ಗುಣಗಳನ್ನು ನಿವಾರಿಸಲು ಈ ಕಸಿ ಕ್ರಮವನ್ನು ಮತ್ತೆ ಮತ್ತೆ ಮಾಡಬೇಕಾಗುತ್ತಿತ್ತು. ಇದರಿಂದ ಈ ಕ್ರಮವು ಬಹಳ ಕಾಲ ಹಿಡಿಯುತ್ತಿತ್ತು ಮತ್ತು ಇದರಲ್ಲಿ ನಿರ್ದಿಷ್ಟವಾದ ಪರಿಣಾಮವನ್ನು ಹೊಂದುವುದು ಕಷ್ಟವಾಗಿತ್ತು. ಇಂದು ನಾವು ಉಪಯೋಗಿಸುವ ಅನೇಕ ಆಹಾರ ಪದಾರ್ಥಗಳು ಈ ರೀತಿಯಿಂದ ಮಾರ್ಪಡಿಸಲ್ಪಟ್ಟಿರುವವು.

ಸುಮಾರು ೨೦೦ ವರ್ಷಗಳ ಹಿಂದೆ, ಗ್ರೆಗೊರ್ ಮಾನ್ಡೆಲ್ ಎಂಬ ವಿಜ್ಞಾನಿಯು, ಬಟಾಣಿ ಗಿಡದಲ್ಲಿ ತಾನು ಮಾಡಿದ ಸಂಶೋಧನೆಯ ಮೂಲಕ, ಸಸ್ಯಗಳಲ್ಲಿ ಗುಣಗಳು /ಲಕ್ಷಣಗಳು ಪೂರ್ವಜರಿಂದ ಹೇಗೆ ಮುಂದಿನ ಪೀಳಿಗೆಗೆ ದೊರೆಯುತ್ತದೆ ಎಂಬುದನ್ನು ತಿಳಿಸಿದನು. ಈ ಸಂಶೋಧನೆಯು ವಿಜ್ಞಾನಿಗಳಿಗೆ ಆಹಾರ ಪದಾರ್ಥಗಳ ಗುಣಗಳನ್ನು ಮಾರ್ಪಡಿಸುವುದಕ್ಕೆ ಒಂದು ಹೊಸ ದಾರಿಯನ್ನು ತೆರೆಯಿತು.

ನಾವು ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ಹೆಚ್ಚಾಗಿ DNA (Deoxyriboneucleic Acid)ಇದೆ. ೫೦ರ ದಶಕದಲ್ಲಿ ಸಶೋಧಕರು DNAಯನ್ನು ಮಾರ್ಪಡಿಸಿದರೆ ಆ ಆಹಾರ ಪದಾರ್ಥದ ಗುಣಗಳನ್ನು ಮಾರ್ಪಡಿಸಬಹುದು ಎಂಬುದನ್ನು ತಿಳಿಸಿದರು. DNA ಕಣಗಳಲ್ಲಿ ಜೀವಕ್ಕೆ, ಅದರ ಗುಣ/ಲಕ್ಷಣಗಳಿಗೆ ಕಾರಣವಾಗಿರುವ ಮಾಹಿತಿಯು ಕಾಪಾಡಲ್ಪಟ್ಟಿರುತ್ತದೆ. ಈ ಮಾಹಿತಿ ಎಡಿನೀನ್, ಸೈಟೋಸೀನ್, ಗಾನೀನ್ ಮತ್ತು ತೈಮೀನ್ ಎಂಬ ೪ ರಸಾಯನಿಕ ವಸ್ತುಗಳಲ್ಲಿ ಕಾಪಾಡಲ್ಪಟ್ಟಿರುತ್ತದೆ. DNA ಕಣಗಳ ವಿವಿಧ ಗುಂಪುಗಳು ಇರುತ್ತವೆ. ಇವನ್ನು genes ಎನ್ನುತ್ತಾರೆ. ಇವು ಆ ಸಸ್ಯದ ಗುಣ ಅಥವಾ ಲಕ್ಷಣಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವುದರಲ್ಲಿ ಬೇಕಾದ ರಾಸಾಯನಿಕ ವಸ್ತುಗಳ ಉತ್ಪಾದನೆಯನ್ನು ಮಾಡುತ್ತವೆ. ಪ್ರತಿಯೊಂದು gene ಒಂದು ಗುಣವನ್ನೋ, ಲಕ್ಷಣವನ್ನೋ ಕೊಡುತ್ತದೆ. ಆದ್ದರಿಂದ DNAಗಳು ಪ್ರತಿಯೊಂದು ಪ್ರಾಣೀ ಅಥವಾ ಸಸ್ಯದ ಗುಣ /ಲಕ್ಷಣಗಳ ಭಂಡಾರ ಎನ್ನಬಹುದು. ನಮಗೆ ಬೇಕಾದ ಗುಣಕ್ಕೆ ಕಾರಣವಾದ gene ಅನ್ನು transgene ಎನ್ನುತ್ತಾರೆ. ಇದು ಯಾವುದೇ ಒಂದು ಸಸ್ಯದಿಂದಲೋ, bacteriaದಿಂದಲೋ, virus ಅಥವಾ ಪ್ರಾಣಿಯಿಂದಲೋ ಬಂದಿರಬಹುದು. ಮುಖ್ಯವಾದುದ್ದೇನೆಂದರೆ ಆ geneಗೆ, ಬೇಕಾದ ಗುಣ ಅಥವಾ ಲಕ್ಷಣ ಇರಬೇಕು.

ಈ ರೀತಿಯ ಮಾರ್ಪಾಡಿನಲ್ಲಿ,ಮೊದಲಿನ ಕಸಿ ಮಾಡುವಿಕೆಯಂತೆ trial & error ಇಲ್ಲ. ಅನಗತ್ಯವಾದ ಗುಣಗಳು ಸೇರುವುದಿಲ್ಲ. ಒಂದು ನಿರ್ದಿಷ್ಟವಾದ ಪರಿಣಾಮವನ್ನು ಕೊಡಬಲ್ಲ ವಿಧಿ. ಬಹಳ ನಿರ್ದಿಷ್ಟವಾದ ಮತ್ತು ವಿಳಂಬವಿಲ್ಲದ ವಿಧಿ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಹಿಂದೆ ಕಸಿ ಮಾಡುವಿಕೆಯಲ್ಲಿಯೂ genesನಲ್ಲಿ ಬದಲಾವಣೆ ತರಲಾಗುತ್ತಿತ್ತು. ಆದರೆ ಅದು ನೇರ ರೂಪದಲ್ಲಿ ಅಲ್ಲ, ನಿಧಾನವಾಗಿ, ಹಂತಹಂತದಲ್ಲಿ ಬದಲಾವಣೆ ಬರುತ್ತಿತ್ತು.

ಜೈವಿಕ ತಂತ್ರದ ಬಳಕೆಯಿಂದ genesನಲ್ಲಿ ಬೇಕಾದ ಬದಲಾವಣೆಯನ್ನು ನೇರವಾಗಿ, ನಿರ್ದಿಷ್ಟವಾಗಿ, ಅತ್ಯಲ್ಪಕಾಲದಲ್ಲಿ ಮಾಡಲಾಗುತ್ತಿದೆ. ಈ ಕ್ರಮದಲ್ಲಿರುವ ಮಾರ್ಪಾಡನ್ನು ಬಿಟ್ಟರೆ, ವಸ್ತುತಃ ಬೇರೆ ಯಾವ ವ್ಯತ್ಯಾಸವೂ ಇಲ್ಲ.

ಆದ್ದರಿಂದ, ಆಹಾರಪದಾರ್ಥಗಳನ್ನು genetically modified ಅನ್ನುವುದಕ್ಕಿಂತ bio-engineered ಎನ್ನುವುದು ಸೂಕ್ತವಾದದ್ದು. ಏಕೆಂದರೆ, ಕಸಿ ಮಾಡುವುದರಲ್ಲಾಗಲಿ, ಅಥವಾ ಜೈವಿಕ ತಂತ್ರದಿಂದಾಗಲಿ, ಎರಡರಲ್ಲೂ geneಗಳ modification ಆಗೇ ಆಗುತ್ತದೆ. Bio-engineered ಅಂದರೆ ಅದು ಈ ಬದಲಾವಣೆಯನ್ನು ತಂದ ಕ್ರಮವನ್ನು ಸರಿಯಾಗಿ ಸೂಚಿಸುತ್ತದೆ.

ಜೈವಿಕ ತಂತ್ರದಿಂದ ಮಾರ್ಪಾಡಾದ ಬೆಳೆಗಳಲ್ಲಿ ಬಹಳ ಪ್ರಯೋಜನಗಳುಂಟು. ಉದಾ: ಏಷ್ಯಾ ಖಂಡದ ಅನೇಕ ಭಾಗಗಳಲ್ಲಿ ಅಕ್ಕಿ ಪ್ರಾಧಾನ್ಯವಾದ ಆಹಾರ. ಇಲ್ಲಿ ಅನೇಕರು ವಿಟಮಿನ್ 'ಎ'ನ ಕೊರತೆಯ ಕಾರಣದಿಂದ ದೃಷ್ಟಿದೋಷದಿಂದ ನರಳುತ್ತಾರೆ. ಜೈವಿಕ ತಂತ್ರದಿಂದ ಅಕ್ಕಿಯಲ್ಲಿ Daffodil ಹೂವಿನ geneಗಳನ್ನು ಸೇರಿಸಿದಾಗ, ಆ ಅಕ್ಕಿಗೆ ಬೀಟಾಕ್ಯಾರೋಟೀನ್ ಎಂಬ ವಸ್ತುಗಳನ್ನು ಉತ್ಪನ್ನ ಮಾಡುವ ಶಕ್ತಿಯನ್ನು ಕೊಡಬಹುದು. ಬೀಟಾಕ್ಯಾರೋಟೀನ್ ಮುಂದಕ್ಕೆ ವಿಟಮಿನ್ 'ಎ' ಉತ್ಪತ್ತಿಗೆ ನೆರವಾಗುತ್ತದೆ. ವಿಟಮಿನ್ ಎ ನೆರವಿನಿಂದ ದೃಷ್ಟಿದೋಷ ಪರಿಹಾರವಾಗುತ್ತದೆ.

ಇದೆ ರೀತಿ, ಸಸ್ಯಗಳು ಕ್ರಿಮಿಕೀಟಗಳ ಹಾವಳಿಯನ್ನು ಎದುರಿಸುವ ಶಕ್ತಿಯನ್ನು ಹೆಚ್ಚಿಸಬಹುದು. ಉದಾ : ಜೋಳದ ಕಾಳಿನಲ್ಲಿ ವಿಜ್ಞಾನಿಗಳು Bacillus Thurigiensis (BT) ಎಂಬ bacteriaದ gene ಅನ್ನು ಸೇರಿಸಿದ್ದಾರೆ. ಈ gene ಜೋಳವನ್ನು ಹಾಳು ಮಾಡುವ ಕ್ರಿಮಿಯು ನಾಶವಾಗುವಂತೆ ಒಂದು ವಿಷ ಪದಾರ್ಥವನ್ನು ಉತ್ಪತ್ತಿ ಮಾಡುತ್ತದೆ. ಈ ವಿಷವು ಆ ಕ್ರಿಮಿಗಳನ್ನು ನಾಶಮಾಡುತ್ತದೆ. ಆದರೆ ಮನುಷ್ಯರಿಗೆ ಈ ವಿಷವು ಹಾನಿಕರವಲ್ಲ. ಇದರಿಂದ ಕೀಟನಾಶಕಗಳ ಬಳಕೆಯು ಕಮ್ಮಿಯಾಗಿ, ರೈತನಿಗೆ ಲಾಭ ಹೆಚ್ಚುತ್ತದೆ.

ತೈಲಬೀಜಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೈಲಾಂಶ, ಅಥವಾ ಆಧುನಿಕ processing ಪದ್ಧತಿಗಳಿಗೆ ಅನುಕೂಲವಾಗುವಂತೆ ಗುಣಗಳು ಬರುವಂತೆ ಬದಲಾಣೆಗಳನ್ನು ಮಾಡಬಹುದು. ಹೀಗೆಯೇ ತರಕಾರಿ ಹಣ್ಣುಗಳಲ್ಲಿ, ಬೀಜವಿಲ್ಲದ ಹಣ್ಣುಗಳು, ಸಾಗಾಟದಲ್ಲಿ ಕೆಡದಂತಹ ಹಣ್ಣು, ತರಕಾರಿಗಳು, ಇತ್ಯಾದಿಗಳನ್ನೂ ಮಾಡಬಹುದು.

### ಜೈವಿಕ ತಂತ್ರದಿಂದ ಸಸ್ಯದಲಿ ಮಾರ್ಪಾಡು ಮಾಡುವುದು ಹೇಗೆ?

ಎರಡು ಮುಖ್ಯವಾದ ವಿದಗಳಿವೆ

ಬೇಕಾದ ಗುಣವುಳ್ಳ DNAಯನ್ನು ಬೇರ್ಪಡಿಸುವದು.

⇩

ಈ DNAಯನ್ನು ಒಂದು ಬಳೆಯಂತಿರುವ genetic plasmid ಅನ್ನುತ್ತಾರೆ. ಈ plasmid ಅನ್ನು ಒಂದು bacterium ತನ್ನಲ್ಲಿ ಸೇರಿಸಿಕ್ಕೊಂಡು ಬೇಕಾದ ಸಸ್ಯದ cellಗೆ ಕೊಂಡೊಯ್ಯುತ್ತದೆ.

⇩

bacterium ಸಸ್ಯದ cellಸೇರಿದನಂತರ plasmid ಅನ್ನು ಅಲ್ಲಿಯೇ ಬಿಡುತ್ತದೆ.

⇩

ಈಗ ಆ ಹೊಸ DNA ಸಸ್ಯದ cellನಲ್ಲಿ ಸೇರಿಕೊಳ್ಳುತ್ತದೆ ಮತ್ತು ಅದರ ಗುಣ ಸಸ್ಯಕ್ಕೆ ಸೇರುತ್ತದೆ.

ಬೇರ್ಪಡಿಸಿದ DNA ಅನ್ನು ಒಂದು ಅತಿ ಸೂಕ್ಷ್ಮವಾದ ಲೋಹ ಕಣಕ್ಕೆ ಹಚ್ಚುವುದು.

⇩

ಈ ರೀತಿಯ ಕಣವನ್ನು ''gene gun'' ನ್ನಿ ಸಹಾಯದಿಂದ ಸಸ್ಯದ cell ಗೆ ಹೊಡೆಯುವುದು

⇩

ಇದರಿಂದ ಆ ಸೂಕ್ಷ್ಮ ಕಣವು cellನೊಳಗೆ ಹೋಗಿ ಸೇರಿಕೊಳ್ಳುತ್ತದೆ.

⇩

ಬದಲಾದ ಸಸ್ಯದ cellಗಳನ್ನು ಗುರುತಿಸಿ, ಅವನು ಬೇರ್ಪಡಿಸಿ ಬೆಳೆಸುವುದು. ಹೊಸ cellಗಳು ಹುಟ್ಟಿಕ್ಕೊಂಡಂತೆ, ಅವಲ್ಲಿ ಹೊಸ gene ಕೂಡ ಉತ್ಪತ್ತಿಯಾಗುತ್ತದೆ.

⇩

ಈ ರೀತಿ ಜೈವಿಕತಂತ್ರದಿಂದ ಮಾರ್ಪಾಡಾದ cellಗಳನ್ನು ವಿಶೇಷವಾದ cultureನಲ್ಲಿ ಬೆಳೆಸುವುದು. ಅವು ಬೆಳೆದು, ವಿಕಸಿಸಿ ಸಸ್ಯವಾಗುತ್ತವೆ.

⇩

ಸಸ್ಯಗಳನ್ನು labನಿಂದ ಮಣ್ಣಿಗೆ ಸ್ಥಳಾಂತರಿಸಿ ಸಾಮಾನ್ಯ ರೀತಿಯಲ್ಲಿ ಅವನ್ನು ಬೆಳೆಸುವುದು.

ಈ ಎರಡು ವಿಧಗಳಲ್ಲಿಯೂ, gene ಅನ್ನು ಸಸ್ಯದಲ್ಲಿ ಸೇರಿಸುವ ವಿಧಾನದಲ್ಲಿ ಅಂತರವಿದೆ. ಎರಡನೆಯ ವಿಧದಲ್ಲಿ ಬೇರ್ಪಡಿಸುವ DNAಅನ್ನು ಒಂದು ಅತಿ ಸೂಕ್ಷ್ಮವಾದ ಲೋಹ ಕಣಕ್ಕೆ ಹಚ್ಚುತ್ತಾರೆ. ನಂತರ ಈ ರೀತಿಯ ಕಣವನ್ನು ಒಂದು ''gene gun''ನ್ನಿನ ಸಹಾಯದಿಂದ ಸಸ್ಯದ cellಗೆ ಹೊಡೆಯುತ್ತಾರೆ. ಇದರಿಂದ ಆ ಸೂಕ್ಷ್ಮ ಕಣವು cellನೊಳಗೆ ಹೋಗಿ ಸೇರಿಕೊಳ್ಳುತ್ತದೆ. ಅದನ್ನು ಬಿಟ್ಟರೆ ಉಳಿದ ಎಲ್ಲ ಕ್ರಮವೂ ಒಂದೇ ರೀತಿಯಾಗಿವೆ.

ಜೈವಿಕ ತಂತ್ರ ಮಾರ್ಪಾಡಿಸಿದ ಆಹಾರ ಪದಾರ್ಥಗಳು ಹಾನಿಕರವೇ?

ಕಳೆದ ದಶಕದಲ್ಲಿ ಜೈವಿಕತಂತ್ರದಿಂದ ಮಾರ್ಪಡಿಸಿದ ಆಹಾರ ಪದಾರ್ಥಗಳು, ಕೃಷಿ ಪದ್ಧತಿಯಲ್ಲಿ ಅನೇಕ ಬದಲಾವಣೆಗಳನ್ನು ತಂದಿವೆ. ಇಂದು ಅಮೇರಿಕಾದಲ್ಲಿ ಶೇ. ೫೦ರಷ್ಟು ತೈಲ ಬೀಜಗಳು ಈ ರೀತಿಯಾಗಿ ಬೆಳೆಯಲ್ಪಡುತ್ತವೆ. ಹಣ್ಣು ತರಕಾರಿಗಳಲ್ಲಂತೂ ಅನೇಕ ಲಾಭದಾಯಕ ಮಾರ್ಪಾಡುಗಳನ್ನು ಈ ತಂತ್ರವು ನಮಗೆ ಒದಗಿಸಿದೆ. ಆದರೂ ಇದನ್ನು ಎಲ್ಲರೂ ಯಾಕೆ ಒಪ್ಪುತ್ತಿಲ್ಲ? ಯಾಕೆ ಈ ಬಗ್ಗೆ ಇನ್ನೂ ಚರ್ಚೆಗಳೂ, ವಿವಾದಗಳೂ ಹೆಚ್ಚುತ್ತಿವೆ? ಇದರ ಪರವಾಗಿ ವಾದಿಸುವರು, ಇದನ್ನು ವಿಶ್ವ ಜನಾಂಗದ ಹಸಿವಾರಿಸಲು ಇರುವ ಒಂದೇ ಮಾರ್ಗವೆಂದರೂ, ಇದನ್ನು ವಿರೋಧಿಸುತ್ತಿರುವರು. ಇದರ ಬಗ್ಗೆ ನಮಗೆ ಅನೇಕ ಎಚ್ಚರಿಕೆಯನ್ನು ನೀಡುತ್ತಾರೆ. ಈ ಎರಡೂ ಪಕ್ಷಗಳ ವಾದವನ್ನು ಒಮ್ಮೆ ಸ್ಥೂಲವಾಗಿ ಪರೀಕ್ಷಿಸೋಣ.

ಪರವಾಗಿ ವಾದಿಸುವವರ ಹೇಳಿಕೆ :

- ಕಮ್ಮಿ ಜಮೀನಿನ ಮೇಲೆ ಹೆಚ್ಚು ಬೆಳೆ ಬೆಳೆಯಬಹುದಾದ್ದರಿಂದ, ವಿಶ್ವದ ಆಹಾರ ಕೊರತೆಯನ್ನು ನೀಗಿಸಬಹುದು.

- ಬೆಳೆಗೆ ಕ್ರಿಮಿಕೀಟಗಳನ್ನು ತಡೆಯುವ ಶಕ್ತಿಯನ್ನು ಹೆಚ್ಚಿಸಬಹುದು.

- ವಿಶ್ವದ ಅನೇಕ ಪ್ರಾಂತ್ಯಗಳಲ್ಲಿ ಮುಖ್ಯ ಆಹಾರವಾದ ಅಕ್ಕಿ, ಗೆಣಸು ಇತ್ಯಾದಿಗಳ ಪೌಷ್ಟಿಕಾಂಶವನ್ನು ಹೆಚ್ಚಿಸಬಹುದು.

- ಹಣ್ಣು, ತರಕಾರಿಗಳು ಹೆಚ್ಚುಕಾಲ ಕೆಡದೆ ಇರುವಂತೆ ಮಾಡಬಹುದು.

ವಿರೋಧವಾಗಿ ವಾದಿಸುವವರ ಹೇಳಿಕೆ :

- ಅಸಹಜ ರೀತಿಯಲ್ಲಿ ಬೆಳೆದ ಈ ಬೆಳೆಗಳು, ಯಾವ ಹುದುಗಿಟ್ಟ ದುಷ್ಪರಿಣಾಮಗಳನ್ನು ತರುತ್ತವೆಯೋ ತಿಳಿಯದು. ಇದನ್ನು ಪರೀಕ್ಷಿಸಲು ಹೆಚ್ಚು ಸಮಯ ಬೇಕು.

- ಇವು ನಿಸರ್ಗದ ಮೇಲೆ ಮಾನವನ ಹತೋಟಿಯಲ್ಲಿ ಮತ್ತೊಂದು ಹೆಜ್ಜೆಯ ಸಂಕೇತವಾಗಿವೆ.

- ಕೇವಲ ಕೆಲವು ಬಹುರಾಷ್ಟ್ರ ವಾಣಿಜ್ಯ ಸಂಸ್ಥೆಗಳು ಈ ರೀತಿಯ ಬೆಳೆಗಳ patent ಮಾಡಿಕ್ಕೊಂಡು ಕೃಷಿ ವ್ಯವಸಾಯವನ್ನೇ ತಮ್ಮ ಕೈಯಲ್ಲಿಟ್ಟುಕೊಳ್ಳಬಹುದು.

- ಬಡ ರೈತರು ಈ ರೀತಿ ಮಾರ್ಪಾಡಾದ ಬೆಳೆಗಳ ಬೀಜಗಳನ್ನು ಕೊಳ್ಳಲಾಗದೆ, ಈ ಬೆಳವಣಿಗೆಯ ಲಾಭದಿಂದ ವಂಚಿತರಾಗುತ್ತಾರೆ.

ಎರಡು ಪಕ್ಷದ ವಾದದಲ್ಲಿಯೂ ಸತ್ಯಾಂಶವಿದೆ. ಮುಖ್ಯವಾಗಿ ನಾವು ಗಮನಿಸಬೇಕಾದದ್ದು ಈ ಪ್ರಶ್ನೆಗಳನ್ನು:

೧. ಈ ತಂತ್ರವು ವಿಶ್ವದಲ್ಲಿರುವ ಜೈವಿಕ ವೈವಿಧ್ಯತೆ (bio-diversity) ಯನ್ನು ಹೇಗೆ ಮಾರ್ಪಡಿಸಬಹುದು?

೨. ಈ ರೀತಿಯಾಗಿ ಬೆಳೆಸಿದ ಆಹಾರಗಳು ಸೇವಿಸಲು ಸುರಕ್ಷಿತವೇ?

೩. ಈ ಹೊಸ ತಂತ್ರವು ನಮ್ಮ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಹೇಗೆ ಬದಲಾಯಿಸೀತು? ಇದರಿಂದ ಸಾಂಪ್ರದಾಯಿಕವಾಗಿ ಕೃಷಿಯನ್ನು ಅವಲಂಬಿಸಿರುವ ರೈತರಿಗೆ ಏನಾದರೂ ಹಾನಿಯಾಗುತ್ತದೆಯೆ? ಇದರಿಂದ ವಾಣಿಜ್ಯ ಸಂಸ್ಥೆಗಳು, ಕೃಷಿ ಪದ್ಧತಿಯಮೇಲೆ ಅತೀವವಾದ ಹತೋಟಿಯನ್ನು ಹೊಂದುತ್ತಿರುವರೇ?

೪. ಈ ರೀತಿಯಾದ ಪದಾರ್ಥಗಳು ಮಾರುಕಟ್ಟೆಗೆ ಬಂದಾಗ, ಜನರು ತಮ್ಮ ಇಚ್ಛಾನುಸಾರ ಆಹಾರವನ್ನು ಆಯ್ದುಕೊಳ್ಳಲು ಸೂಕ್ತವಾದ ಮಾಹಿತಿ ಒದಗುತ್ತದೆಯೇ?

೫. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಈ ರೀತಿಯ ಆಹಾರಗಳು ಬಂದಾಗ, ಗ್ರಾಹಕರ ಹಿತವನ್ನು ಕಾಪಾಡಲು ಬೇಕಾದ ಕಾನೂನು ವ್ಯವಸ್ಥೆಗಳು ಇವೆಯೇ?

ಈ ವಿಷಯಗಳ ಬಗ್ಗೆ ನಾವು ದೀರ್ಘವಾಗಿ ಆಲೋಚಿಸಬೇಕು. ಇಂದು ಈ ವಿಷಯವನ್ನು ಸುತ್ತಿಕೊಂಡಿರುವ ವಾದವಿವಾದಲ್ಲಿ ಎರಡು ಪಕ್ಷಗಳೂ ಅತಿರೇಕವಾದ ನಿಲುವನ್ನು ತಾಳಿವೆ. ಒಂದು ಬದಿಯಲ್ಲಿ ಈ ಆಹಾರಗಳ ಬಗ್ಗೆ ಭೀತಿಯನ್ನು ಹೆಚ್ಚು ಮಾಡುವ ವಾದಗಳಾದರೆ, ಇನ್ನೊಂದು ಬದಿಯಲ್ಲಿ ಎಲ್ಲಾ ಸಮಸ್ಯೆಗಳಿಗೂ ಇವೆ ಉತ್ತರವೆಂಬಂತೆ ಹೇಳುವವರೂ ಇದ್ದಾರೆ. ಇವೆರಡರ ನಡುವೆ ಸಿಲುಕಿಕೊಂಡಿರುವವರು ಸಾಮಾನ್ಯ ಗ್ರಾಹಕರು. ವಿಜ್ಞಾನಿಗಳು, ವಾಣಿಜ್ಯ ಸಂಸ್ಥೆಗಳು, NGO ಗಳು, food processors, ಕಾನೂನಿನ ಪಾಲಕರು ಎಲ್ಲರೂ ಸೇರಿ ಈ ವಿಷಯವನ್ನು ಚರ್ಚಿಸಬೇಕು. ಮಾನವ ಕುಲಕ್ಕೆ ಇದರಿಂದ ಆಗುವ ಲಾಭವೆಷ್ಟು ಮತ್ತು ಹಾನಿಯೆಷ್ಟು ಎಂಬುದನ್ನು ಎಲ್ಲರೂ ಚೆನ್ನಾಗಿ ಅರಿಯಬೇಕು. ಆಗಲೇ ನಾವು ಈ ಹೊಸ ತಂತ್ರದ ಲಾಭವನ್ನು ಪಡೆಯಲು ಸಾಧ್ಯ.

# ಬಿ.ವಿ. ಕಾರಂತರ ವಿವಿಧ ಮುಖಗಳು : ವಿಚಾರ ಸಂಕಿರಣ

✍ ಓಂದಾಸ್ ಕಣ್ಣಂಗಾರ್

ಮೈಸೂರು ಅಸೋಸಿಯೇಷನ್, ಮುಂಬೈ
ಕನ್ನಡ ಕಲಾಕೇಂದ್ರ, ಮುಂಬಯಿ
ಸಂಗೀತ ನಾಟಕ ಅಕಾಡೆಮಿ, ನವದೆಹಲಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ

ಇವರ ಜಂಟಿ ಆಶ್ರಯದಲ್ಲಿ ಮೈಸೂರು ಅಸೋಸಿಯೇಷನ್ ಸಭಾಗೃಹದಲ್ಲಿ ಆಯೋಜಿಸಿದ ಬಿ.ವಿ. ಕಾರಂತ ನಾಟಕೋತ್ಸವದ 4ನೇ ದಿನದ ಕಾರ್ಯಕ್ರಮದಲ್ಲಿ 'ಬಿ. ವಿ. ಕಾರಂತರ ವಿವಿಧ ಮುಖಗಳು' ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಪಾಲ್ಗೊಂಡವರು, ಕಳೆದ ಮೂರು ದಶಕಗಳಿಂದ ರಂಗಭೂಮಿ, ಸಿನೇಮಾಕ್ಷೇತ್ರದಲ್ಲಿ, ಕಾರಂತರೊಂದಿಗೆ ಕೆಲಸ ಮಾಡಿ, ಅವರನ್ನು ಹತ್ತಿರದಿಂದ ಬಲ್ಲ, ಈಗ ಈ ಎರಡು ಕ್ಷೇತ್ರಗಳಲ್ಲೂ ಅದ್ಭುತ ಯಶಸ್ಸನ್ನು ಸಾಧಿಸಿರುವ ನಿರ್ದೇಶಕ ಟಿ. ಎಸ್. ನಾಗಭರಣ, ನಟಗಾಯಕ ಸುಂದರ್ ರಾಜ್, ರಂಗವಿನ್ಯಾಸಕಾರ ಚಂದ್ರಕುಮಾರ್ ಸಿಂಗ್, ರಂಗಗೀತೆಗಳ ಮೂಲಕ ಹೆಸರು ಮಾಡಿರುವ ಗಾಯಕಿ, ನಟಿ ಕಲ್ಪನಾ ನಾಗನಾಥ್ ಹಾಗೂ ದೂರದ ಮುಂಬಯಿಯಲ್ಲಿದ್ದುಕೊಂಡು ಕಾರಂತರ ಒಡನಾಟ ಇಲ್ಲದಿದ್ದರೂ, ಅವರ ನಾಟಕಗಳ ಒಡನಾಟದಿಂದ ತನ್ನ ನಾಟಕಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾ ಬೆಳೆದ ರಂಗ ನಿರ್ದೇಶಕ ಭರತ್‌ಕುಮಾರ್ ಪೊಲಿಪು, ಹಾಗೂ ಇನ್ನೊಬ್ಬ ರಂಗ ಕರ್ಮಿ ಮಂಜುನಾಥಯ್ಯ ಹಾಗೂ ವಿಮರ್ಶಕ ಡಾ| ಜಿ. ಎನ್. ಉಪಾಧ್ಯ.

ಪ್ರಶ್ನೆ : ಕಾರಂತರು ನನಗೇಕೆ ಇಷ್ಟ? ಎಂಬುದರ ಬಗ್ಗೆ ಮಂಜುನಾಥಯ್ಯ ಮಾತನಾಡುತ್ತಾ : ಕಾರಂತರು ನಿರ್ದೇಶಿಸಿದ ಬ್ರೆಕ್ಟ್ ನಾಟಕಗಳನ್ನು ನೋಡಿದಾಗ ನಾನು ಪ್ರಭಾವಿತನಾಗಿದ್ದೆ. ಅದರ ಸಂಗೀತ ಅದ್ಭುತವಾಗಿತ್ತು. ಕಾರಂತರ ನಾಟಕಗಳಲ್ಲಿ ಉತ್ಸವಗಳನ್ನು ಇದ್ದಕ್ಕಿದ್ದಂತೆ ಅಳವಡಿಸುವುದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿತ್ತು. ಇಂತಹ ಅವರ ಪ್ರತಿಭೆ ಕಂಡು ಅವರಿಗೆ ಮಾರು ಹೋದೆ ಎಂದರು.

**ನಾಗಭರಣ ಮಾತನಾಡುತ್ತಾ** : ಒಬ್ಬ ವ್ಯಕ್ತಿ ತನ್ನನ್ನು ತಾನು ರೂಪಿಸಿಕೊಳ್ಳಲಿಕ್ಕಾಗಿ ಶ್ರಮವಹಿಸುತ್ತಾನೆ. ಆದರೆ ತನಗಿಂತಲೂ ಜಗತ್ತನ್ನು ಜಗತ್ತಿನ ಜನರನ್ನು ರೂಪಿಸುವ ವ್ಯಕತಿಗಳು ಕಡಿಮೆ. ಅಂತಹ ಧೀಮಂತ ವ್ಯಕ್ತಿ ಬಿ.ವಿ. ಕಾರಂತರನ್ನು ಮೂರು ದಶಕಗಳ ಹಿಂದೆ ಗಳಿಸಿದ್ದು ನನ್ನ ಪುಣ್ಯ. ಈ ದಿನ ನಾನು ಇಲ್ಲಿ ಕೂರಲು ಅವರೇ ಕಾರಣ. ನಾನು ಯಾವುದೇ ಸಾಧನೆಗಳನ್ನು ಸಾಧಿಸಿದ್ದರೆ ಅದರ ಪ್ರೇರಣೆ ಶಕ್ತಿ, ಸ್ಫೂರ್ತಿ ಅವರದಾಗಿತ್ತು. ಗುಬ್ಬಿಯಿಂದ ಸುರಬಿ, ಕಂಪನಿಯವರೆಗೆ ಯಾತ್ರೆಯಲ್ಲಿ ನಾನು ಒಬ್ಬ ಯಾತ್ರಿಯಾಗಿ, ರಂಗಕ್ರಿಯೆಗೆ ಸ್ಪಂದಿಸುತ್ತಾ ಅದರೊಂದಿಗೆ ಕ್ರಿಯಾಶೀಲರಾಗುತ್ತಾ ನಿಮ್ಮೊಂದಿಗೆ ಇದ್ದೇನೆ ಎಂದರು.

**ಸುಂದರರಾಜ್ ಮಾತನಾಡುತ್ತಾ** : ಯಾರಿಗೂ ತಂದೆ ಯಾಕೆ ಇಷ್ಟ ಆಗುತ್ತಾರೆ, ತಾಯಿ, ಸ್ನೇಹಿತರು, ಅಣ್ಣ ತಮ್ಮಂದಿರು, ಹೀಗೆ ಗುರುಗಳು ಮಾರ್ಗದರ್ಶನ ಮಾಡುತ್ತಾರೆ. ತಮ್ಮ ತಪ್ಪುಗಳನ್ನು ತಿದ್ದುತ್ತಾರೆ. ನನಗೆ ಹೆತ್ತ ತಂದೆ ಒಬ್ಬರಾದರೆ ನನ್ನ ಸಾಕಿದ ತಂದೆ ಬಿ.ವಿ. ಕಾರಂತರು ನಾಟಕಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಾಗುವಂತಿದ್ದರೆ ಅದಕ್ಕೆ ಅವರೇ ಕಾರಣ. ಅವರು ನನ್ನ ಮೇಲೆ ಅವರ ನೆನಪನ್ನು ತುಂಬಾ ಜವಾಬ್ದಾರಿಯನ್ನು ಬಿಟ್ಟು ಹೋಗಿದ್ದಾರೆ. ಅದು ಅವರು ಜೀವನದಲ್ಲಿ ಏನನ್ನೆಲ್ಲಾ ಸಾಧಿಸಬೇಕೆಂದು ಬಯಸಿದ್ದರು. ಅದರೊಂದಿಗೆ ಅವರು ಸದಾ ಜಗತ್ತು ನನ್ನದು, ಇಲ್ಲಿ ಏನಾದರೂ ಸಾಧಿಸಬೇಕೆಂಬ ನಿರಂತರ ಹಂಬಲ ಇಟ್ಟುಕೊಂಡವರು. ಅವರು ನನ್ನನ್ನು ಮೊತ್ತ ಮೊದಲ ಬಾರಿಗೆ ನಾಟಕದಲ್ಲಿ ಆಯ್ಕೆ ಮಾಡದೇ ಇರುತ್ತಿದ್ದರೆ ನಾನು ಏನೋ ಕ್ಲಾರ್ಕ್, ಆಫೀಸ್ ಅಂತ ಅಲೆಯುತ್ತಿದ್ದೆ ಅಥವಾ ಬೇರೇನೋ ಆಗುತ್ತಿದ್ದೆ. ಕಾರಂತರು ನೇರ ನುಡಿಯವರು. ಇವತ್ತು ಯಾರೂ ಏನೂ ನಿರ್ದೇಶನ ಮಾಡುತ್ತಿದ್ದರೂ ಅದು ಕಾರಂತರು ಹಾಕಿದ ನಿರ್ದೇಶನ. ಕಾರಂತರು ಏನೂ ಮಾಡಿದರೂ ನನಗೆ ಇಷ್ಟವೇ. ಅವರು 40 ಮಂದಿಯ ದೊಡ್ಡ ತಂಡವನ್ನು ಬಿಟ್ಟು ಹೋಗಿದ್ದಾರೆ. ಈಗ ಅದೇ ನಮ್ಮ ಆಸ್ತಿ. ನಮಗೆ ಸಿನೇಮಾ ಮಾಧ್ಯಮ ಇದ್ದರೂ ರಂಗಭೂಮಿಗೆ ನಮ್ಮನ್ನು ಅರ್ಪಿಸಿಕೊಂಡಿದ್ದೇವೆ. ಮತ್ತೆ ಮತ್ತೆ ರಂಗ ಭೂಮಿ ಮೇಲೆ ಬರಬೇಕು, ನಾಟಕ ಆಡಬೇಕು, ನಿಮ್ಮನ್ನು ನೋಡಬೇಕು ಎಂಬ ಕಾತುರ ಇದೆಲ್ಲಾ ಕಾರಂತರು ಹೇಳಿಕೊಟ್ಟ, ಅವರನ್ನು ನೋಡಿ ಕಲಿತ ಪಾಠ. ಅದನ್ನು ಎಂದೂ ನಾವು ಮರೆಯುವುದಿಲ್ಲ ಎಂದು ಕಾರಂತರೊಂದಿಗಿನ ಅನುಭವವನ್ನು ಹಂಚಿಕೊಂಡರು.

**ಚಂದ್ರಕುಮಾರ್ ಸಿಂಗ್** : ಕಾರಂತರು ಒಂದು ಫೋರ್ಸ್, ಅವರಿಗೆ ರಂಗಭೂಮಿಯ ಬಗ್ಗೆ ಅಪಾರ ಕಾಳಜಿ ಇತ್ತು. ನಮ್ಮ ತಂಡ ಬೆಂಗಳೂರು ಬಿಟ್ಟರೆ ಮುಂಬಯಿಯಲ್ಲೆ ಹೆಚ್ಚು ನಾಟಕಗಳನ್ನು ಮಾಡಿದ್ದು, ನಮ್ಮ ತಂಡದಷ್ಟು ಬೇರಾವ ತಂಡದವರು ನಾಟಕ ಮಾಡುವುದಿಲ್ಲ. ಅದಕ್ಕೆ ಕಾರಣ ಕಾರಂತರೇ. ಅವರು ಒಬ್ಬ ಫೋರ್ಸ್ ಆಗಿ ವರ್ಕ್ ಮಾಡಿದ್ದಾರೆ. ಅವರು ಬೇರೆ ಬೇರೆ ಕಡೆಯ ನಿರ್ದೇಶಕರನ್ನು ಕರೆದುಕೊಂಡು ಬಂದು ನಾಟಕ ಮಾಡಿಸಿದ್ದಾರೆ. ಅಂತಹ ಬೆನ್ನುತಟ್ಟುವಂತಹ ಒಳ್ಳೆಯ ಗುಣವು ಅವರಲ್ಲಿತ್ತು ಎಂದರು.

**ಭರತ್‌ಕುಮಾರ್ ಪೊಲಿಪು** : ಒಬ್ಬ ರಂಗ ವಿದ್ಯಾರ್ಥಿಗೆ ಕಾರಂತರು ಹೇಗೆ ಇಷ್ಟ ಎಂದು ಕೇಳಿದರೆ ಹೇಳಲು ತುಂಬಾ ಕಷ್ಟ. ಅಂತಹ ಮೇರು ವ್ಯಕ್ತಿತ್ವದ ವ್ಯಕ್ತಿ ಅವರಾಗಿದ್ದರು. ಒಮ್ಮೆ ಪತ್ರಿಕೆಗಾಗಿ ಅವರ ಸಂದರ್ಶನ ಮಾಡುತ್ತಿದ್ದಾಗ ಕಳೆದ ಎರಡು ಮೂರು ಗಂಟೆ, ಎಲ್ಲೂ ತನ್ನ ವ್ಯಕ್ತಿತ್ವವನ್ನು ತೋರ್ಪಡಿಸದೆ ಅತ್ಯಂತ ಪ್ರೀತಿಯಿಂದ ವರ್ತಿಸಿದ್ದು ನನಗೆ ತುಂಬಾ ಇಷ್ಟವಾಗಿದೆ. ತುಂಬಾ ವರ್ಷಗಳ ಹಿಂದೆ ಅವರ ನಿರ್ದೇಶನದ ಹೌಸ್‌ಫುಲ್ ನಾಟಕವನ್ನು ನಾನು ನಿಂತು ನೋಡಿದ್ದು, ಅಮೇಲೆ ಇಷ್ಟರವರೆಗೆ ಯಾರದೇ ಅಂತಹ ಹೌಸ್ ಫುಲ್ ನಾಟಕ ಪ್ರದರ್ಶನ ಕಾಣದ್ದು ನನ್ನನ್ನು ಇಂದಿಗೂ ಕಾಡುತ್ತಿದೆ. ಕಾರಣ ಅವರ ನಾಟಕ ಅಷ್ಟೊಂದು ಪರಿಣಾಮಕಾರಿಯಾಗಿತ್ತು. ಅವರ ನಾಟಕನೋಡುತ್ತಲೇ ನಾವೆಲ್ಲಿದ್ದೇವೆ ಎಂಬ ಆತ್ಮ ವಿಮರ್ಶೆ ಮಾಡಲು ಸಾಧ್ಯವಾಗಿದೆ. ನನಗೆ ಕಾರಂತರೊಂದಿಗೆ ಒಂದು ಶಿಬಿರ ಮಾಡಲಿಲ್ಲವೆಂಬ ವೇದನೆ ಇದೆ. ಬಹುಶಃ ಶಿಬಿರ ಮಾಡುತ್ತಿದ್ದರೆ ರಂಗಶೀಲತೆ ತುಂಬಾ ಬದಲಾಗ ಬಹುದಿತ್ತು. ಅವರು ಯಾವಾಗಲೂ ನಾಟಕದ ಧ್ವನಿಯನ್ನು ನಾಟಕದ ಮೂಲಕ ಕಂಡು ಹಿಡಿಯುತ್ತಿದ್ದರು. ಅವರ ನಾಟಕಗಳಲ್ಲಿಯ ಮೇಳ ಉತ್ಸವದ ರೀತಿಯಲ್ಲಿದ್ದು ನನಗೆ ತುಂಬಾ ಇಷ್ಟವಾಗುತ್ತಿತ್ತು.

**ಕಲ್ಪನಾ ನಾಗನಾಥ್** : ನನಗೆ ಕಾರಂತರ ಬಗ್ಗೆ ಮಾತನಾಡಲಿಕ್ಕೆ ಯೋಗ್ಯತೆ ಇದೆಯೋ ಗೊತ್ತಿಲ್ಲ. ನಾನು ಈ ಕ್ಷೇತ್ರಕ್ಕೆ ಬರುವಾಗ ಅವರು ಬೆಳೆದು ದೊಡ್ಡವರಾಗಿದ್ದರು. ಅವರು ನಮ್ಮಲ್ಲಿಗೆ ಬರುವಾಗ ಹೆದರಿಕೆಯಾಗುತ್ತಿತ್ತು. ಆದರೆ ದಿನಕಳೆದಂತೆ ಅವರ ಮಗುವಿನಂತಹ ಮನಸ್ಸು ನನ್ನನ್ನು ತುಂಬಾ ಹತ್ತಿರಕ್ಕೆ ತಂದಿತ್ತು. ಅವರ ಸರಳತೆಯನ್ನು ಕಂಡು ಬೆರಗಾಗಿದ್ದೆ. ಅವರು ಯಾವುದೇ ಗೀತೆಗೆ ಸಂಗೀತ ಸಂಯೋಜಿಸುವಾಗ ಇಂತಹದೊಂದು ಟ್ಯೂನ್ ರಚಿಸಬಹುದೆಂದು ಕಲ್ಪಿಸಲು ಅಸಾಧ್ಯ. ಅದಲ್ಲದೆ ನಮ್ಮಂತಹ ಕಿರಿಯರಿಗೆ ಯಾವ ಸಂಗೀತ ನಿರ್ದೇಶಕ ಅಷ್ಟೊಂದು ಸಲುಗೆ ಕೊಡಲು ಸಾಧ್ಯವಿಲ್ಲ. ಆದರೆ ಕಾರಂತರಲ್ಲಿ ಅಂತಹ ಸೌಜನ್ಯ ಇತ್ತು. ಅವರು ಎಷ್ಟರ ಮಟ್ಟಿಗೆ ಇಷ್ಟ ಅಂದರೆ, ನಮ್ಮ ಒಡನಾಡಿಯಾದಂತೆ ಅವರು ಗುರುಗಳು, ತಂದೆ, ಮೇಷ್ಟ್ರು ಎಲ್ಲಾ ಆಗಿದ್ದರು. ಮುಂದಿನ ದಿನಗಳಲ್ಲಿ ಅವರು ಹೇಳಿಕೊಟ್ಟ ಸಂಗೀತವನ್ನು ಪ್ರತಿ ಊರಿಗೂ ಕೊಂಡೊಯ್ಯುವ ಪಣ ತೊಟ್ಟಿದ್ದೇನೆ. ಮೇಷ್ಟ್ರು ಸದಾ ಹೇಳುತ್ತಿದ್ದರು. ನಾನು ಹೇಳಿದ್ದನ್ನು, ಹಾಗೆ ದಯವಿಟ್ಟು ಹೇಳಿ ಎಂದು. ಈ ರೀತಿ ಹೇಳಿ ಅವರು ಹೊರಟು ಹೋಗಿದ್ದಾರೆ. ನಾವೆಲ್ಲ ಬೆನಕ ತಂಡದ ಮೂಲಕ ಸಂಗೀತ ಮುಂದುವರಿಸುತ್ತೇವೆ. ಅದರ ಬಗ್ಗೆ ತುಂಬಾ ಪೂಜ್ಯ ಭಾವನೆ ನಮ್ಮಲ್ಲಿದೆ.

ಪ್ರಶ್ನೆ : ಕಾರಂತರ ಅನನ್ಯತೆ ಬಗ್ಗೆ? ರಂಗಭೂಮಿಗೆ ಅವರ ಕೊಡುಗೆ?

ಮಂಜುನಾಥಯ್ಯ: ಮೊದಲು ನಮ್ಮಲ್ಲಿ ಜನಪದ ರಂಗಭೂಮಿಯ ಪರಂಪರೆ ಇದ್ದರೂ ಯಾಕೋ ಪಾಶ್ಚಾತ್ಯ ನಾಟಕದ ಮೇಲೆ ಪ್ರಭಾವ ಇತ್ತು. ಆದರೆ ಭಾರತೀಯ ರಂಗಭೂಮಿಯ ಶಕ್ತಿ ಮೊದಲೇನಿತ್ತೊ ಅದನ್ನು ಕಾರಂತರು ಮತ್ತೆ ದೊರಕಿಸಿಕೊಟ್ಟರು. ಆದ್ದರಿಂದ ಕಾರಂತರು ಭಾರತ ರಂಗಭೂಮಿಯ ನಿಜವಾದ ಶಕ್ತಿ. ಎಂದರು.

ನಾಗಭರಣ : ಕಾರಂತರು ರಾಷ್ಟ್ರೀಯ ರಂಗಭೂಮಿಗೆ ನಿರ್ದೇಶಕ ಪಟ್ಟವನ್ನು ತಂದುಕೊಟ್ಟವರು. ಮೊದಲು

ಬೇರೆ ನಿರ್ದೇಶಕರು ಇದ್ದರೂ, ರಂಗಭೂಮಿಯ ಎಲ್ಲಾ ನಿಟ್ಟಿನಲ್ಲೂ ಒಬ್ಬ ಪರಿಪೂರ್ಣ ನಿರ್ದೇಶಕರು ಇದ್ದರೂ, ರಂಗಭೂಮಿಯ ಎಲ್ಲಾ ನಿಟ್ಟಿನಲ್ಲೂ ಒಬ್ಬ ನಿರ್ದೇಶಕ ಹೇಗಿರಬೇಕೆಂದು ಅಲ್ಲದೆ ಇಂದಿನವರಿಗೆ ಏನಾದರೂ ಸಾಧಿಸಬಹುದೆಂದು ತೋರಿಸಿಕೊಟ್ಟವರು. ಕಾರಂತರು ಕನ್ನಡ ರಂಗಭೂಮಿಗೆ ಬಂದ ಮೇಲೆ ಒಬ್ಬ ನಿರ್ದೇಶಕನ ಪಟ್ಟ ತಿಳಿದು ಬಂತು. ಅವರ 'ಸತ್ತವರ ನೆರಳು' ಅಗಾಧವಾದ ಶಕ್ತಿಯನ್ನು ಪಡೆದಿದೆ. ಖಾಲಿ ಒಂದು ಬೋರ್ಡ್ ಹಾಕಿದರೆ ಅವರ ನಾಟಕ ಹೌಸ್‌ಫುಲ್ ಕಾಣುತಿತ್ತು. ಅದು ಕಾರಂತರಿಂದ ಮಾತ್ರ ಸಾಧ್ಯ. ಸಂಗೀತಕ್ಕೆ ಅವರು ಯಾವುದೇ Instrument ಬಳಸದೆ ಅಲ್ಲಿಯ ಪರಿಸರವನ್ನೇ ಬಳಸಿ ನಾಟಕಕ್ಕೆ ಧ್ವನಿ ಸಂಯೋಜನೆ ಮಾಡುತ್ತಿದ್ದರು. ಇದೊಂದು ಅವರ ವಿಶೇಷವಾದ ಕೊಡುಗೆ. ಇದನ್ನು ಯಾರೂ ಮಾಡಲಿಲ್ಲ. ಆದ್ದರಿಂದ ಅದನ್ನು ನೆನಪಿಸಬೇಕಾಗುತ್ತದೆ.

**ಪ್ರಶ್ನೆ** : ಕಾರಂತರ ಛಾಪು / ಪ್ರಭಾವದಿಂದ ಬಿಡಿಸಿಕೊಳ್ಳಲು ಸಾಧ್ಯವೇ?

**ಭರತ್‌ಕುಮಾರ್ ಪೊಲಿಪು** : ಕಾರಂತರ ಛಾಪನ್ನು ಬಿಡಿಸಿಕೊಳ್ಳಲು ಅಸಾಧ್ಯ. ಕಾರಂತರು ಅನ್ವೇಷಣೆ ಮಾಡಿದ ನಾಟಕಗಳನ್ನು ಅಷ್ಟೇ ಸಶಕ್ತವಾಗಿ ಇಟ್ಟುಕೊಳ್ಳಲು ಸಾಧ್ಯವೇ ? ಅಥವಾ ಅದನ್ನು ಮಾಡಲು ಸಾಧ್ಯವೇ? ಕಾರಂತರು ಒಟ್ಟು ರಂಗಭೂಮಿಯನ್ನು ರೂಪಿಸಿದ್ದಾರೆ.

**ಪ್ರಶ್ನೆ** : ನಟನಾಗಿ ತಿಳಿದುಕೊಂಡದ್ದು ?

**ಸುಂದರ್ ರಾಜ್** : ಕಾರಂತರನ್ನು ಒಮ್ಮೊಮ್ಮೆ ಅರ್ಥ ಮಾಡಲಿಕ್ಕೆ ಕಷ್ಟ. ಆದರೆ ಕೆಲವೊಮ್ಮೆ ಪ್ರಿಯವಾಗುತ್ತಾರೆ. ಪಾತ್ರಗಳನ್ನು ಚೆನ್ನಾಗಿ ಮಾಡಲು ಅವರ ನಿರ್ದೇಶನವೇ ಕಾರಣ. ಕರ್ನಾಟಕ ವಿಷಯದಲ್ಲಿ ಹೇಳಬೇಕಾದರೆ ಕಾರಂತರಿಗೆ ನಮ್ಮಲ್ಲಿ ರಂಗಾಯಣ, ರಂಗಶಿಕ್ಷಣಕೇಂದ್ರ ಆಗಬೇಕೆಂಬ ಹಂಬಲ ಇತ್ತು. ಪರಿಪೂರ್ಣವಾಗಿ ಸಕಲವು ಗೊತ್ತಿರಬೇಕೆಂಬ ಚಿಂತನೆ ಇತ್ತು. ಅವರು ರಂಗ ಶಿಕ್ಷಣಕ್ಕೆ ಅನನ್ಯ ರೂಪ ಕೊಟ್ಟವರು. 'ಸತ್ತವರ ನೆರಳು' ಕಾರಂತರ ಅನನ್ಯ ರಂಗ ಪ್ರಯೋಗ, ಅವರ ಸಾವು ಕೂಡಾ ಒಂದು ನಾಟಕ ಆಗಿ ಹೋಯಿತು. ಕಾರಂತರು ಬದುಕನ್ನು ಬಹಳ ಆಸೆಪಟ್ಟವರು. ಯಾಕೆಂದರೆ ಬದುಕಿನಲ್ಲಿ ತುಂಬಾ ಸಾಧಿಸಬೇಕೆಂದಿದ್ದವರು. ಅವರನ್ನು ಎಲ್ಲಿ ಹೋದರೂ ಬಾಬಾ, ಮೇಷ್ಟ್ರು ಅಂತಂತ ಹೇಳುತ್ತಿದ್ದರು. ಹಾಗೆ ಯಾವುದೇ ನಿರ್ದೇಶಕರನ್ನು ಕರೆಯುತ್ತಿರಲಿಲ್ಲ.

**ಪ್ರಶ್ನೆ** : ಒಬ್ಬ ನಿರ್ದೇಶಕನೇ ಮುಖ್ಯವಾಗಿ ಬಿಟ್ಟರೆ ಕಲಾವಿದನಿಗೆ ಪ್ರಾಮುಖ್ಯ ಇಲ್ಲವೇ?

**ಸುಂದರ್ ರಾಜ್** : ಅಂತಹ ವಿಷಯ ತುಂಬಾ ಸಲ ಆಗಿದೆ. ನನ್ನ ಮೊದಲ ನಾಟಕದ ಪಾತ್ರ ನೋಡಿ N.C.C.ಯ ಶೂ ತರಹ ಹಾಕಿ ಒದೆಯೋ ತರಹ ಇತ್ತು ಅಂದಿದ್ದರು. ಆದರೆ ಎಂದೂ ಕಾರಂತರು ತನ್ನನ್ನು ತಾನು ದೊಡ್ಡವನೆಂದು ತಿಳಿಯಲಿಲ್ಲ. ಅಲ್ಲದೆ ತಾನೆಲ್ಲ ಕಲಿತಿದ್ದೇನೆ ಎಂಬ ಭಾವನೆಯೂ ಅವರಲ್ಲಿ ಇರಲಿಲ್ಲ. ಅವರನ್ನು ಅರ್ಥಮಾಡಿಕೊಳ್ಳಲು ಮಗುವಾಗಿರಬೇಕು. ಕೆಲವೊಮ್ಮೆ ಬೇರೆಯವರು ಕೆಟ್ಟದಾಗಿ ಅಭಿನಯಿಸಿದ್ದೀರಿ ಎಂದು ಹೇಳಿದರೂ ಮೇಷ್ಟ್ರು ಏನೂ ಹೇಳುತ್ತಿರಲಿಲ್ಲ. ರಂಗಭೂಮಿಯೆಂಬುದು ಗ್ರಂಥ ಇದ್ದಂತೆ, ಟಿ.ವಿ. ಎನ್ನುವುದು ನ್ಯೂಸ್ ಪೇಪರ್ ಇದ್ದಂತೆ, ಓದಿ ಬಿಸಾಡುವುದು ಕಾರಂತರು ಸದಾ ಅನನ್ಯರಾಗುತ್ತಾರೆ. ಅದಕ್ಕೆ ಅವರು ಮಾಡಿದ ಕೆಲಸಗಳೇ ಸಾಕ್ಷಿ. ಎನ್ನುತ್ತಾ ಮತ್ತೊಬ್ಬ ಕಾರಂತ ಹುಟ್ಟುವುದು ಕಷ್ಟ. ನೋ.. ಏನೂ ಅಲ್ಲದ ನನ್ನಂತವನನ್ನು ಇಲ್ಲಿ ತಂದು ನಿಲ್ಲಿಸಿದ್ದಾರೆ. ಅವರು ಸದಾ ಸಮುದಾಯದಲ್ಲಿ ನಟನನ್ನು ಹುಡುಕುವ ಕೆಲಸವನ್ನು ಮಾಡುತ್ತಿದ್ದರು ಎನ್ನುತ್ತಾ ನಾನು ದಿನನಿತ್ಯದ ನನ್ನ ಬದುಕಿನಲ್ಲಿ ಅವರನ್ನು ಅಳವಡಿಸಿಕೊಳ್ಳುತ್ತೇನೆ ಎಂದರು.

**ಪ್ರಶ್ನೆ** : ಚಂದ್ರಕಾಂತವರೇ ಕಾರಂತರೊಂದಿಗಿನ ಅನುಭವ?

ಕಾರಂತರಿಗೆ ಬೈಯ್ಯುವರು ನಂತರದ ದಿನಗಳಲ್ಲಿ ಅವರನ್ನು ತುಂಬಾ ಮೆಚ್ಚಲಾರಂಭಿಸಿದ್ದರು. ಕಾರಂತರು ನಮ್ಮಲ್ಲಿ ಕಲಾವಿದರಿಲ್ಲವೆಂದು ಹೇಳಿ ನಮಗೂ ಪಾತ್ರ ಕೊಟ್ಟಿದ್ದರು. ನಾಗಭರಣವನ್ನು ಒಬ್ಬ ನಟನಾಗಿಯೂ ಕಾರಂತರು ಮೆಚ್ಚಿದ್ದಾರೆ.

**ಪ್ರಶ್ನೆ** : ಸಿನೇಮಾ ಮಾಧ್ಯಮದಲ್ಲಿ ಕಾರಂತರ ವಿಚಾರ?

**ನಾಗಾಭರಣ** : ನನ್ನನ್ನು ನಿರ್ದೇಶಕನಾಗಿ ರೂಪಿಸಿದ್ದು ಅವರೇ. ನಾನು ರಂಗದ ಹಿಂದೆ ಕೆಲಸ ಮಾಡುತ್ತಿದ್ದೆ. ಆ ಕಾಲದಲ್ಲಿ ಅವರು ಎಲ್ಲಿ ಹೋದರೂ ನನ್ನನ್ನು ರಿಹರ್ಸಲ್ ನೋಡಲು ಹೇಳಿ ಹೋಗುತ್ತಿದ್ದರು. ಅವರು ಹೇಳಿದಷ್ಟನ್ನೇ ಮಾಡುತ್ತಿದ್ದೆ. ಆ ಕಾರಣದಿಂದಲೇ ನನ್ನೊಳಗಿನ ನಿರ್ದೇಶಕ ರೂಪ ಪಡೆಯುತ್ತಾ ಬಂತು. ನನ್ನೊಳಗಿನ ನಿರ್ದೇಶಕವನ್ನು ಗುರುತಿಸಿದ್ದೇ ಕಾರಂತರು. ಒಬ್ಬ ನಟ, ರಂಗಕರ್ಮಿ, ನಿರ್ದೇಶಕನನ್ನು ಗುರುತಿಸುವ, ರೂಪಿಸುವ ಶಕ್ತಿ ಕಾರಂತರಲ್ಲಿ ಇತ್ತು. ಅವರು ನಮ್ಮನ್ನು ನಾವು ಕಲಿತುಕೊಳ್ಳುವ ಹಾದಿಯನ್ನು ನಮ್ಮ ನಂಬಿಕೆ ಮೇಲೆ ಬಿಟ್ಟು ಹೋಗುತ್ತಿದ್ದರು. ಕಾರಂತರು ಒಬ್ಬ ವ್ಯಕ್ತಿಯನ್ನು ಬಳಸಿಕೊಳ್ಳುತ್ತಾ ಅವರ ಶಕ್ತಿಯನ್ನು ಉಪಯೋಗಿಸುತ್ತಿದ್ದರು. 'ಚೋಮನ ದುಡಿ'ಯ ಮೊದಲ ಕೆಲಸದಿಂದ ಕೊನೆಯ ದಿನದವರೆಗೆ ಅವರೊಂದಿಗೆ ಇದ್ದೆ. ನಾನು ಚಿತ್ರ ನಿರ್ದೇಶಕನಾಗಲು ಅವರೇ ಕಾರಣ ಎಂದರು.

**ಪ್ರಶ್ನೆ** : ಅರ್ಥವಿಲ್ಲದಂತಹ ಪದಗಳನ್ನು ಬಳಸಿಯೂ ಗೀತೆ ರಚಿಸುತ್ತಿದ್ದರಲ್ಲಾ?

**ಕಲ್ಪನಾ ನಾಗಂನಾಥ್** : 1, 2, 3 ಮಗ್ಗಿಯನ್ನು ಕಾರಂತರು 'ಇಸ್ಪೀಟ್ ರಾಜ' ಮಕ್ಕಳ ನಾಟಕದಲ್ಲಿ ಒಳ್ಳೆಯ ಗೀತೆಯಾಗಿ ಮಾರ್ಪಡಿಸಿದ್ದರು. ಅಂತಹ ಪ್ರತಿಭೆ ಅವರಲ್ಲಿತ್ತು. ಅವರು ಏನೂ ಕುಟ್ಟಿದರೂ ಸಂಗೀತವೇ? ಅವರು ಕೊನೆಯವರೆಗೂ ಏನಾದರೂ ಹುಡುಕುತ್ತಲೇ ಇದ್ದರು. ಯಾವುದೇ ರೀತಿಯ ಶಬ್ದ ವಿಭಜನೆ ಮಾಡುವಾಗ ಅದರ ಸಾಹಿತ್ಯಕ್ಕೆ ಪೆಟ್ಟು ಅಪಚಾರ ಆಗದಂತೆ ಬಳಸಿಕೊಳ್ಳುತ್ತಿದ್ದರು. ಅವರೊಬ್ಬ ಒಳ್ಳೆಯ ಲೇಖಕ ಕೂಡಾ. ಅವರೊಂದಿಗೆ ರಂಗ ಸಂಗೀತದಲ್ಲಿ ಬೆಳೆದ ಅನುಭವದಿಂದ ಕಾರಂತರು ಹೇಳಿದ ದಾಟಿಗಳಿಗೆ ಪಕ್ಕನೆ Adjust ಆಗುತ್ತಿದ್ದೆ.

**ಪ್ರಶ್ನೆ** : ಕಾರಂತರಿಗೆ ಪ್ರಶಸ್ತಿ ಪುರಸ್ಕಾರ ಸಿಕ್ಕಿದ್ದು ಕಡಿಮೆಯಲ್ಲ?

**ನಾಗಾಭರಣ** : ಕಾರಂತರು ಕರ್ನಾಟಕಕ್ಕೆ, ಇಡೀ ಭಾರತಕ್ಕೆ ದೊಡ್ಡ ಪ್ರಶಸ್ತಿ. ಅವರು ಒಂದು ತರಹ ಫಿನಿಕ್ಸ್ ಪಕ್ಷಿ ಇದ್ದ ಹಾಗೆ., ಮತ್ತೆ ಮತ್ತೆ ಎದ್ದು ಬರುತ್ತಿದ್ದರು. ಒಂದು ಅದ್ಭುತವಾದ ಆಶಾಭಾವನೆ ಅವರಲ್ಲಿತ್ತು. ಸಾಯುವ ಕಾಲದಲ್ಲಿ ಬದುಕುವ ಆಶೆ ಅವರಲ್ಲಿತ್ತು. ಫಿನಿಕ್ಸ್ ಪಕ್ಷಿ ಸದಾ ಕಾಲ ಮತ್ತೆ ಮತ್ತೆ ಜೀವಂತವಾಗಿರುತ್ತದೆ. ಮತ್ತೆ ಮತ್ತೆ ಜೀವಂತವಾಗಿರಲಿ ಎಂದು ಆಶಿಸುತ್ತೇನೆ.

**ಪ್ರಶ್ನೆ** : ಪ್ರಯೋಗ ಶೀಲರಾಗಿ ಕಾರಂತರು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದಾರೆ?

**ಭರತ್‌ಕುಮಾರ್** : ಅವರ ಛಾಪು ಖಂಡಿತ ಮುಂದುವರಿಯುತ್ತದೆ. ಅವರ ನಾಟಕಗಳಲ್ಲಿ ಆಕ್ಷನ್ ಎಲ್ಲಾ ಭಾಗಗಳಲ್ಲೂ ಪ್ರಜ್ವಲಿಸುತ್ತಿತ್ತು. ಒಂದು ನಿಮಿಷ ಕೂಡಾ ವೇಸ್ಟ್ ಆಗುತ್ತಿರಲಿಲ್ಲ. ಸಂಗೀತದ ಗುಣ, ದೃಶ್ಯ, ಧ್ವನಿ ಎಲ್ಲವೂ ಅನನ್ಯವಾಗುತಿತ್ತು. ಅವರು ರೂಪಿಸಿದ್ದ ಒಟ್ಟು ಮೇಳ, ಸಂಗೀತ, ನಟನೆ ಅದ್ಭುತವಾದುದು.

**ಪ್ರಶ್ನೆ** : ಅವರು ನಟರನ್ನು ಬೆಳೆಸಲಿಲ್ಲ Product ಮಾಡಲಿಲ್ಲ ಅಲ್ಲವೇ?

**ನಾಗಾಭರಣ** : ಅವರು ಬೆಳೆಸಿದ ಗುಂಪು ಕೂಡಾ ಒಂದು ನಟನೇ ಅಲ್ಲವೇ. ಒಂದು ಮಾರ್ಮಿಕವಾದ ದೃಶ್ಯವನ್ನು ರೂಪಿಸುವ ತಾಕತ್ತು ಅವರಲ್ಲಿತ್ತು. ನಟನನ್ನು ರೂಪಿಸುವ ಶೈಲಿ ಅವರದೇ ಆಗಿತ್ತು. ಅವರಂತಹ ನಿರ್ದೇಶಕನನ್ನು ನಾನೆಂದೂ ನೋಡಲಿಲ್ಲ. ಒಬ್ಬರನ್ನು ನಂಬಿದರೆ ಅವರ ಮೇಲೆ ಪೂರ ಭರವಸೆ ಇಟ್ಟು ತನ್ನ ಪಾಡಿಗೆ ತಾನಿರುತ್ತಿದ್ದರು. ಅವರ ನಂಬಿಕೆಗಳು ಬೇರೆ ಬೇರೆ ರೂಪವಾಗಿದ್ದವು. ರಂಗಶಿಕ್ಷಣವನ್ನು ಬೇರೆ ಬೇರೆ ಕಡೆಗಳಿಗೆ ಕೊಂಡೊಯ್ಯುವ ಕೆಲಸವನ್ನು ಕಾರಂತರು ಮಾಡಿದ್ದಾರೆ.

ಈ ವಿಚಾರಗೋಷ್ಠಿಯ ಸಂಚಾಲಕತ್ವದ ಜವಾಬ್ದಾರಿಯನ್ನು ಹೊತ್ತು ರಂಗ ತಜ್ಞರಿಗೆ ಅರ್ಥಪೂರ್ಣವಾದ ಸವಾಲುಗಳನ್ನು ತೆತ್ತು ಪ್ರೇಕ್ಷಕರಿಗೆ ಕಾರಂತರ ಬಗ್ಗೆ ಇನ್ನಷ್ಟು ತಿಳಿಯುವಂತೆ ಸಂವಾದವನ್ನು ಚುರುಕು ಮಾಡಿದವರು ವಿಮರ್ಶಕ ಜಿ.ಎನ್. ಉಪಾಧ್ಯ.

ಕೊನೆಗೆ ಧನ್ಯವಾದವನ್ನು ಮಂಜುನಾಥಯ್ಯ ಮಾಡಿದರೆ, ಅಸೋಸಿಯೇಶನ್ ಅಧ್ಯಕ್ಷರಾದ ದೊರೆಸ್ವಾಮಿಯವರು ಹೂಗುಚ್ಛ ನೆನಪಿನ ಕಾಣಿಕೆಕೊಟ್ಟು ರಂಗತಜ್ಞರನ್ನು ಸತ್ಕರಿಸಿದರು.

ಆರಂಭದಲ್ಲಿ ಕಾರಂತರ ನಾಟಕಗಳ ರಂಗಗೀತೆಗಳು ನಡೆಯಿತು.

•

# ಭಾರತೀಯ ಕಲೆ

**ಭಾಗ - 20**

**ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖಿ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.**

ದ್ರೌಪದಿರಥ'ದ ಮೂರು ಕಡೆ ಮಕರ ತೋರಣವಿದ್ದು, ದುರ್ಗಾದೇವಿಯ ಪ್ರತಿಮೆಗಳಿಗೆ ಗೂಡುಗಳಂತೆ ಕಾಣಿಸುತ್ತವೆ. ಪೂರ್ವ ದಿಕ್ಕಿನ ಭಾಗದಲ್ಲಿ ದುರ್ಗಿಯು ಮಹಿಷಾಸುರನನ್ನು ವಧಿಸಿದ್ದು, ಬೇರ್ಪಟ್ಟಿರುವ ಅವನ ತಲೆಯ ಮೇಲೆ ತನ್ನ ಕಾಲನ್ನಿಟ್ಟಿದ್ದಾಳೆ. ಪಶ್ಚಿಮದ ಭಾಗದಲ್ಲಿ ಇಬ್ಬರು ದ್ವಾರಪಾಲಕರು ನಿಂತಿದ್ದು, ಅದೇ ಪ್ರವೇಶದ್ವಾರ ಎಂಬರ್ಥವನ್ನು ಕೊಡುತ್ತದೆ. ಒಳಗೆ ಚತುರ್ಭುಜಗಳ ದುರ್ಗಾದೇವತೆಯು ನಿಂತಿರುವಳು. ಅರ್ಜುನ ರಥದ ಕೆತ್ತನೆಗಳುತುಂಬಾ ಸೂಕ್ಷ್ಮವಾಗಿವೆ. ಅಂಕಣದ ಮಧ್ಯದಲ್ಲಿ ವಿಷ್ಣು, ಗರುಡನ ಮೇಲೆ ತುಸುಬಾಗಿರುವನು. ಇಂದ್ರನು ಐರಾವತವನ್ನು ಸವಾರಿ ಮಾಡುತ್ತಿರುವನು. ಶಿವನು ನಂದಿಯ ಮೇಲೆ ಬಾಗಿರುವನು. ಈ ಅಂಕಣದ ಅತಿ ಸುಂದರ ಕೆತ್ತನೆಯೆಂದರೆ ರಾಜದಂಪತಿಗಳು ಮತ್ತು ಅವರ ಪರಿವಾರದವರು.

ಭೀಮರಥವು ಸಿಂಹಾಕೃತಿಯ ಸ್ತಂಭಗಳನ್ನು ಹೊಂದಿದೆ. ರಥದ ಸುತ್ತಲೂ ಚಿಕ್ಕಚಿಕ್ಕ ಚಿತ್ರಗಳನ್ನು ಕೊರೆದಿದ್ದು, ರಥದ ಮೇಲೆ ವೇಸರ ಶೈಲಿಯಲ್ಲಿ ಏಕತಲ ವಿಮಾನವನ್ನು ಕೆತ್ತಲಾಗಿದೆ.

ಧರ್ಮರಾಜ ರಥವು ಮಿಕ್ಕ ರಥಗಳಿಗಿಂತ ಎತ್ತರವಾದುದಾಗಿದೆ. ಆದಿತಲದಲ್ಲಿ ಶಿವನ ಎರಡು ಶಿಲ್ಪಗಳಿವೆ, ಪಶ್ಚಿಮಕ್ಕೆ ಮುಖ ಮಾಡಿರುವ ಚತುರ್ಭುಜ ಶಿವ ಮತ್ತು ಅರ್ಧನಾರೀಶ್ವರ. ಮೂರು ತಲೆ ಕಾಣಿಸುತ್ತಿರುವ ಬ್ರಹ್ಮ ಮತ್ತು ಹರಿಹರರು ಉತ್ತರಕ್ಕೆ ಮುಖ ಮಾಡಿರುವರು. ರಾಜನು ದಕ್ಷಿಣದ ಕಡೆಗೆ ನೋಡುತ್ತಿರುವನು. ಮಧ್ಯತಲದ ತುಸುಭಾಗವು ಅಪೂರ್ಣವಾಗಿದೆ. ಶಿವ ಮತ್ತು ವಿಷ್ಣು ದೇವತೆಗಳ ಬೇರೆ ಬೇರೆ ರಚನಾ ಶೈಲಿಗಳನ್ನು ಕಾಣುತ್ತೇವೆ. ಸೋಮಸ್ಕಂದನಾಗಿರುವ ಶಿವನ ಉಬ್ಬು ಚಿತ್ರವು ಇಲ್ಲಿ ತುಂಬಾ ಪ್ರಮುಖವಾದುದಾಗಿದೆ. ಇಲ್ಲಿ ಶಿವನು ಉಮಾ ಮತ್ತು ಕಾರ್ತಿಕೇಯರೊಡನಿದ್ದಾನೆ. ಶಿವನು ಲಲಿತಾಸನ ಭಂಗಿಯಲ್ಲಿ ಕುಳಿತಿರುವನು. ಶಿರೋಭೂಷಣವು ಜಟಾಮಕುಟವನ್ನು ಹೊಂದಿದ್ದು ಎತ್ತರವಾಗಿದೆ. ಎಡಗೈ ತೊಡೆಯ ಮೇಲಿದ್ದು, ಬಲಗೈಯನ್ನು ಚಿನ್ಮುದ್ರೆಯಲ್ಲಿಟ್ಟುಕೊಳ್ಳಲಾಗಿದೆ. ಪಾರ್ವತಿಯೂ ಲಲಿತಾಸನದಲ್ಲಿರುವಳು. ಆಕೆಯ ಕಣ್ಣುಗಳು ತನ್ನ ಬಲತೊಡೆಯ ಮೇಲೆ ಕುಳಿತಿರುವ ಮಗು ಕಾರ್ತಿಕೇಯನ ಕಡೆಗೆ ತುಸು ಬಾಗಿವೆ. ಬ್ರಹ್ಮ ಮತ್ತು ವಿಷ್ಣು ಹಿಂದುಗಡೆ ನಿಂತಿರುವರು.

ನಕುಲ ಸಹದೇವ ರಥವು ಬಳಪದಕಲ್ಲಿನ ಉಬ್ಬುಚಿತ್ರವನ್ನು ಹೊಂದಿದ್ದು, ಏಕತಲ ವಿಮಾನ ಇದರಲ್ಲಿದ್ದು, ದ್ರಾವಿಡ ಶೈಲಿಯಲ್ಲಿ ಕೆತ್ತಲಾಗಿದೆ. ಏಕಶಿಲಾ ಆನೆಯನ್ನು ಕೆತ್ತಲಾಗಿದ್ದು, ಗಜಪೃಷ್ಠಾಕಾರ ಮಾದರಿಯ ಬೃಹದ್ವ್ಯಾಸ ದೇವಾಲಯವನ್ನು ಹೋಲುತ್ತದೆ.

ಇನ್ನು ಪಲ್ಲವರ ಕಾಲದ ಶಿಲ್ಪಶೈಲಿಗೆ ನರಸಿಂಹ ಎರಡನೇ ರಾಜಸಿಂಹನು ಕಟ್ಟಿಸಿದ ಮಹಾಬಲಿ ಪುರಂನ ಸಮುದ್ರ ತೀರದ ಗುಡಿಗಳನ್ನೂ, ಕಾಂಚೀಪುರಂನ ಕೈಲಾಸನಾಥ ದೇವಾಲಯವನ್ನೂ ಹೆಸರಿಬಹುದು. ಮಹಾಬಲಿಪುರಂನ ದಂಡೆಯಲ್ಲಿರುವ ದೇವಾಲಯಗಳಲ್ಲಿ ಸೋಮಸ್ಕಂಧ ಉಬ್ಬು ಚಿತ್ರಗಳನ್ನೇ ತುಸು ಭಿನ್ನ ಭಿನ್ನ ರೀತಿಗಳಲ್ಲಿ ಕಾಣುತ್ತೇವೆ. ಪಶ್ಚಿಮದ್ವಾರವನ್ನು ಹೊಂದಿರುವ ರಾಜಸಿಂಹೇಶ್ವರ ದೇವಾಲಯ, ಪೂರ್ವದ್ವಾರವನ್ನು ಹೊಂದಿರುವ ಕ್ಷತ್ರಿಯ ಸಿಂಹೇಶ್ವರ ದೇವಾಲಯಗಳಲ್ಲಿ ಈ ಉಬ್ಬು ಚಿತ್ರಗಳನ್ನು ಕಾಣಬಹುದು. ಶಿಲ್ಪಕಲಾ ಅಲಂಕಾರಗಳ ಉತ್ಕೃಷ್ಟತೆಯನ್ನು ಕಂಚಿಯ ಕೈಲಾಸನಾಥ ದೇವಾಲಯದಲ್ಲಿ ನೋಡುತ್ತೇವೆ. ಒಳಪ್ರಾಕಾರದಲ್ಲಿ ಐವತ್ತೆಂಟು ಚಿಕ್ಕ ದ್ವಿತಲ ವಿಮಾನಗಳಿವೆ. ಉತ್ತರದ ಕಡೆಗೆ ಮುಖಮಾಡಿರು ಆರು, ದಕ್ಷಿಣದ ಕಡೆಗೆ ಮುಖ ಮಾಡಿರುವ ಎರಡು ಚಿಕ್ಕ ದೇವಸ್ಥಾನಗಳಿವೆ. ಪೂರ್ವದಲ್ಲಿ ಎತ್ತರಿಸಿದ ಪೀಠದ ಮೇಲೆ ಮಲಗಿರುವ ನಂದಿ ಇದೆ. ಎಲ್ಲಾ ಕಟ್ಟಡಗಳಲ್ಲಿಯೂ ದೇವತೆಗಳ ಅನೇಕ ಮೂರ್ತಿ ಶಿಲ್ಪಗಳು ಇವೆ. ಗರ್ಭಗೃಹದ ದಕ್ಷಿಣ ಗೋಡೆಯಲ್ಲಿರುವ ಗೂಡಿನಲ್ಲಿ ಯೋಗಾ ದಕ್ಷಿಣಾಮೂರ್ತಿ ಸುಂದರ ಶಿಲ್ಪ ನಮ್ಮ ಗಮನವನ್ನು ಸೆಳೆಯುತ್ತದೆ. ದಕ್ಷಿಣ ಮೂರ್ತಿಯು ಯೋಗ ಮುದ್ರೆಯಲ್ಲಿದ್ದು ಕಾಲುಗಳಿಗೆ ಪಟ್ಟಿಯನ್ನು ಬಿಗಿಯಲಾಗಿದೆ. ಮುಂದಿನ ಬಲಗೈ ಯೋಗಮುದ್ರಾ ಭಂಗಿಯಲ್ಲಿಯೂ, ಮುಂದಿನ ಎಡಗೈ ಅಭಯಮುದ್ರಾ ಭಂಗಿಯಲ್ಲಿಯೂ ಇವೆ. ಹಿಂದಿನ ಬಲಗೈಯಲ್ಲಿ ಅಕ್ಷಮಾಲೆ ಮತ್ತು ಹಿಂದಿನ ಎಡಗೈಯಲ್ಲಿ ಅಗ್ನಿಯು ಕಮಲದ ಮೊಗ್ಗಿನಾಕಾರದಲ್ಲಿ ಇರುತ್ತವೆ. ಲಿಂಗೋದ್ಭವ ಮೂರ್ತಿ, ತ್ರಿಪುರಾಂತಕ ಮೂರ್ತಿ, ವೈಕುಂಠ ಪೆರುಮಾಳ್ ದೇವಾಲಯದ ವಿಷ್ಣು ಮುಂತಾದ ದೇವತಾಮೂರ್ತಿ ಶಿಲ್ಪಗಳು ಕಲಾ ಸೌಂದರ್ಯಕ್ಕೆ ಹೆಸರುವಾಸಿಯಾಗಿವೆ. ಪಲ್ಲವ ಅರಸರ, ಶಿಲ್ಪಿಗಳ ಮತ್ತು ಪ್ರಜೆಗಳ ದೈವ ಭಕ್ತಿ ಹಾಗೂ ಅವರ ಕಲಾಶಕ್ತಿಯನ್ನು ತಿಳಿದುಕೊಳ್ಳಬೇಕಾದರೆ ಮಹಾಬಲಿಪುರಂ ಮತ್ತು ಕಂಚಿಗಳಲ್ಲಿ ನೆಲೆಸಿರುವ ಈ ದೇವಾಲಯಗಳನ್ನು ಸಂದರ್ಶಿಸಬೇಕು.

**ಚೋಳರು ಮತ್ತು ಪಾಂಡ್ಯರು**

ಕ್ರಿ.ಶ. ೯ರಿಂದ ೧೩ನೇ ಶತಮಾನಗಳ ನಡುವೆ ಆಳಿದ ಚೋಳರು ತುಂಗಭದ್ರಾನದಿಯ ದಕ್ಷಿಣಕ್ಕಿರುವ ಪ್ರದೇಶವನ್ನು ಒಂದು ಗೂಡಿಸಿದರು. ವಿಜಯಾಲಯ ಮತ್ತು ಅವನ ಮಗನಾದ ಒಂದನೇ ಆದಿತ್ಯ ಇವರಿಬ್ಬರ ಆಶ್ರಯದಿಂದ ತಂಜಾವೂರು ಜಿಲ್ಲೆ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ನಿರ್ಮಿತವಾದ ಪ್ರಾರಂಭದ ಚೋಳ ದೇವಾಲಯಗಳನ್ನು ಕಾಣಬಹುದು. ಚೋಳರು ಕಟ್ಟಾ ಶೈವ ಭಕ್ತರಾದ್ದರಿಂದ ಬಹುಪಾಲು ಶಿಲ್ಪಗಳು ಶೈವ ಸಂಪ್ರದಾಯಕ್ಕೆ ಮುಡಿಪಾಗಿವೆ. ದೇವಾಲಯಗಳ ಹೊರ ಒಳಗೋಡೆಗಳ ಮೇಲೆ ಅನೇಕ ರೀತಿಯ ದೇವತೆಗಳ ಕಾಲ್ಪನಿಕ ಮೂರ್ತಿಗಳನ್ನು ಕೊರೆದದ್ದಲ್ಲದೆ ಎರಕಚ್ಚುಗಳಿಂದ ತಯಾರಿಸಿದ ಚಿತ್ರಗಳನ್ನು ಶಿಲ್ಪಾಲಂಕಾರಗಳಿಗಾಗಿ ಉಪಯೋಗಿಸಲಾಗಿದೆ.

ಚೋಳರ ಶಿಲ್ಪಕಲೆಯು ಪಲ್ಲವ ಮತ್ತು ಪಾಂಡ್ಯರ ಮಾದರಿಗಳನ್ನು ಅನುಸರಿಸಿದಂತೆ ಕಂಡುಬಂದರೂ, ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿರುತ್ತವೆ. ಇದರ ಬಗ್ಗೆ ವಿದ್ವಾಂಸರಿಂದ ಇನ್ನೂ ಸಾಕಷ್ಟು ಸಂಶೋಧನೆಯಾಗಬೇಕಾಗಿದೆ. ಸಾಮಾನ್ಯವಾಗಿ ಹೇಳಬೇಕಾದರೆ ಚೋಳರ ಕಲೆಯು ಹೆಚ್ಚಿನ ಚಲನೆ ಮತ್ತು ಕೆಲಸದ ಸ್ವಾತಂತ್ರ್ಯದಲ್ಲಿ ಸಾಮರಸ್ಯತೆ ಕಂಡುಬರುತ್ತದೆ. ಮಾನವಾಕೃತಿ ರಚನೆಗಳಲ್ಲಿ ಅಮೂರ್ತತೆ ಕಡಿಮೆಯಾಗಿ ಕಂಡುಬರುತ್ತದೆ. ದೇವತೆಗಳನ್ನು ಮತ್ತು ಮನುಷ್ಯರನ್ನು ಪ್ರತಿನಿಧಿಸುವ ಶಿಲ್ಪಗಳನ್ನು ರಚಿಸುವಲ್ಲಿ ಚೋಳರು ಸರಿಯಾದ ವ್ಯತ್ಯಾಸಗಳನ್ನು ಸಮರ್ಥನೀಯವಾಗಿ ರೂಪಿಸಿದ್ದಾರೆ. ಮಾನವಾಕೃತಿಗಳಲ್ಲಿ ಪ್ರತ್ಯೇಕವಾದ ವೈಯಕ್ತಿಕ ಲಕ್ಷಣಗಳು ಎದ್ದು ಕಾಣುತ್ತವೆ. ಆದರೆ ದೇವತೆಗಳ ಆಕೃತಿಗಳಲ್ಲಿ ಎಲ್ಲಾ ಲಕ್ಷಣಗಳು ಸಾಮಾನ್ಯವಾಗಿ ಒಂದೇ ರೀತಿಯಲ್ಲಿ ಕಂಡುಬರುತ್ತದೆ. ಅಲಂಕಾರದ ವಿವರಣೆಗಳನ್ನು ಬಹುವಾಗಿ ಕೊಡಲಾಗಿದೆ. ಪಲ್ಲವರು ತಮ್ಮ ಉಬ್ಬು ಚಿತ್ರಗಳಲ್ಲಿ ತೀರ ಕಡಿಮೆ ಉಬ್ಬನ್ನು ಪ್ರಯೋಗಿಸಿದರೆ, ಚೋಳರು ಅತಿ ಹೆಚ್ಚು ಉಬ್ಬನ್ನು ತೋರಿಸಿದ್ದಾರೆ.

ತಿರುಚಿನಾಪಳ್ಳಿ ಜಿಲ್ಲೆಯ ನಾರ್ತಾಮಲೈಯಲ್ಲಿ ಇರುವ ವಿಜಯಾಲಾಯ ಚೋಳೀಶ್ವರಂ ಎಂಬ ದೇವಸ್ಥಾನವು ಚೋಳರ ಪ್ರಾಚೀನ ಶಿಲ್ಪಕಲೆಯನ್ನು ಪ್ರತಿನಿಧಿಸುತ್ತದೆ. ಇಲ್ಲಿಯ ಬಹುತೇಕ ಶಿಲ್ಪಗಳನ್ನು ಪುದುಕೋಟೆಯ ಸರಕಾರಿ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿ ಪ್ರೇಕ್ಷಕರ ಅನುಕೂಲಕ್ಕಾಗಿ ಇಡಲಾಗಿದೆ. ಮಾತೃಕೆಗಳಲ್ಲಿ ಒಬ್ಬಳಾದ ವೈಷ್ಣವಿ ಶಿಲ್ಪವನ್ನು ಇಲ್ಲಿ ಕಾಣಬಹುದು. ಈಕೆ ವೀರಾಸನದಲ್ಲಿ ಕುಳಿತಿರುವಳು.

ಮೇಲಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದುಕೊಂಡಿದ್ದು, ಕೆಳಗಿನ ಎಡಗೈಯನ್ನು ತನ್ನ ತೊಡೆಯ ಮೇಲೆ ಇಟ್ಟಿದ್ದಾಳೆ. ಬಲಗೈ ಅಭಯ ಮುದ್ರೆಯಲ್ಲಿದೆ. ಆಕೆಯ ಎತ್ತರಕ್ಕೆ ತಕ್ಕಂತೆ ಕಿರೀಟವೂ ಎತ್ತರವಾಗಿದೆ. ಆಕೆಯ ಕೆಳ ಉಡುಪು ಕಾಲುಗಳವರೆಗೆ ತಲುಪಿದ್ದು, ಗೆರೆಗಳು ಮಡಿಕೆಗಳನ್ನು ಸೂಚಿಸುತ್ತವೆ. ಕೇಯೂರಗಳು ಹೆಚ್ಚು ಅಗಲವಾಗಿದ್ದು ಚೋಳಮೂರ್ತಿ ಶಿಲ್ಪಗಳಲ್ಲಿ ಕಂಡುಬರುವ ಸಾಮಾನ್ಯ ಅಲಂಕಾರಿಕ ವಸ್ತುವಾಗಿದೆ. ಇಲ್ಲಿಯ ಮತ್ತೊಂದು ಮೂರ್ತಿ ಶಿಲ್ಪವಾದ ವೀಣಾಧರ ದಕ್ಷಿಣಾ ಮೂರ್ತಿ ಕುಳಿತಿದ್ದು ಕೆಳಗಿನ ಎರಡೂ ಕೈಗಳಲ್ಲಿ ವೀಣೆಯನ್ನು ಹಿಡಿದಿರುವನು. ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಅಕ್ಷಮಾಲೆಯು ಇವೆ. ತಲೆಯ ಕೂದಲು ಗುಂಗುರಿನ ಮುದ್ದೆಯಂತಿದೆ. ಕೆಳ ಉಡುಗೆಯು ವೈಷ್ಣವೀ ಶಿಲ್ಪದ ಮಾದರಿಯಲ್ಲೆ ಕೆತ್ತಲಾಗಿದೆ. ಮುಖ ಲಕ್ಷಣಗಳು ಎರಡೂ ಶಿಲ್ಪಗಳಲ್ಲಿ ಒಂದೇ ಬಗೆಯಲ್ಲಿ ಕಾಣಿಸುತ್ತವೆ. ಚೋಳರ ಅಂತಿಮ ಅವಧಿಯ ಶಿಲ್ಪಕಲೆಯು ಕ್ರಮೇಣವಾಗಿ ಲೋಹಗಳಿಗೆ ಪರಿವರ್ತನೆಗೊಂಡಿದೆ. ಲೋಹದ ಮೂರ್ತಿ ಶಿಲ್ಪಗಳು ತುಂಬಾ ಸಹಜವಾಗಿದ್ದು ನೋಡಲು ಬಹು ಸುಂದರವಾಗಿವೆ.

ಶ್ರೀನಿವಾಸ ನಲ್ಲೂರ್‌ನಲ್ಲಿರುವ ಕೋರಂಗನಾಥ ದೇವಾಲಯದಲ್ಲಿ ಎರಡು ಸೊಗಸಾದ ಚಿತ್ರಗಳಿವೆ. ಶರೀರದ ಗಾತ್ರ, ಉಬ್ಬು - ತಗ್ಗುಗಳು ಮತ್ತು ವಕ್ರ ರೇಖೆಗಳು ಶಿಲ್ಪಗಳನ್ನು ತುಂಬಾ ನೈಜವಾಗಿ ಕಾಣುವಂತೆ ಕೆತ್ತಲಾಗಿದೆ. ಈ ಎರಡು ಶಿಲ್ಪಗಳು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀ ಇವರಿಗೆ ಸಂಬಂಧಿಸಿದ್ದಾಗಿದೆ. ಪುರುಷನ ಬಲಗೈಯು ಅಭಯ ಮುದ್ರೆಯಲ್ಲಿದ್ದು, ಬಲಗಾಲ ಮೇಲೆ ತುಸುಬಾಗಿ ನಿಂತಿರುವನು. ಇವರ ನಗುಮೊಗವು ದಯೆ ಮತ್ತು ತಿಳುವಳಿಕೆಗಳನ್ನು ಹೊರ ಸೂಸುವುದಲ್ಲದೆ ಅಸಾಧಾರಣ ಸೌಂದರ್ಯಕ್ಕೆ ಮಾದರಿಯೇನೋ ಎಂಬಂತಿದೆ. ಸ್ತ್ರೀಯ ಶಿಲ್ಪವು ಪುರುಷ ಶಿಲ್ಪಕ್ಕೂ ಮಿಗಿಲಾದುದೆಂಬಂತೆ ರೂಪಿಸಲಾಗಿದೆ. ಶಿಲ್ಪಿಗೆ ಅಸಂಖ್ಯಾತ ಅಭರಣಗಳ ಪರಿಚಯವಿದ್ದರೂ ಈ ಶಿಲ್ಪದ ಅಲಂಕಾರಕ್ಕಾಗಿ ಅತಿ ಕಡಿಮೆ ಆಭರಣಗಳನ್ನು ಕೆತ್ತಲಾಗಿದೆ. ಆಕೆಯ ನೋಟವು ಅಧೋಮುಖವಾಗಿದ್ದು ನಾಚಿಕೆಯಿಂದ ಹಸನ್ಮುಖಿಯಾಗಿದ್ದಾಳೆ. ತೆಳುವಾದ ಕೈಕಾಲುಗಳು, ಶರೀರದ ಮಾಟಕ್ಕೆ ತುಸು ವ್ಯತಿರಿಕ್ತವಾಗಿವೆ.

ಚೋಳರ ಶಿಲ್ಪಕಲೆಗೆ ತಂಜಾವೂರಿನ ಬೃಹದೇಶ್ವರ ದೇವಾಲಯವು ಅತ್ಯುತ್ತಮ ಮಾದರಿ ಎಂದು ಹೇಳಬಹುದು. ಅದರ ವಾಸ್ತುಶಿಲ್ಪದ ವಿವರಣೆ ತುಂಬಾ ಸೊಗಸಾಗಿದೆ. ಆದರೆ ದೇವಾಲಯದ ಗರ್ಭಗೃಹದ ಹೊರ ಗೋಡೆಗಳ ಮೇಲೆ ಇರುವ ಮೂರ್ತಿಶಿಲ್ಪಗಳು ದುರದೃಷ್ಟವಶಾತ್, ಗಾರೆಯಿಂದ ಮುಚ್ಚಲ್ಪಟ್ಟು ಅವುಗಳ ಸೌಂದರ್ಯ ನೋಡುಗರ ಕಣ್ಣಿಗೆ ಕಾಣದಂತಾಗಿದೆ. ಅಲ್ಲಲ್ಲಿ ಕೆಲವು ಶಿಲ್ಪಗಳು ಮಾತ್ರ ತುಸು ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾಹರಣೆಗೆ ವಿವಿಧ ಭಂಗಿಗಳಲ್ಲಿರುವ ತ್ರಿಪುರಾಂತಕ, ಕಾಲಾರಿ ಮೂರ್ತಿ



ಅಂಕಣ, ನಟರಾಜ, ಗಣೇಶ, ವಿಷ್ಣು ಹಾಗೂ ಆತನ ಪತ್ನಿಯರು, ಗಜಲಕ್ಷ್ಮಿ, ಸರಸ್ವತಿ, ಮಹಿಷಾಸುರ ಮರ್ಧಿನಿ, ಭೈರವ ಮುಂತಾದ ಮೂರ್ತಿ ಶಿಲ್ಪಗಳು ಇಂದಿಗೂ ಚೋಳರ ಶಿಲ್ಪಕಲಾ ಸಂಪತ್ತಿನ ಬಗ್ಗೆ ಸಾಕಷ್ಟು ವಿವರಣೆ ನೀಡುತ್ತವೆ.

ಎಲ್ಲಾ ಪ್ರವೇಶ ದ್ವಾರಗಳಲ್ಲಿ ಬಲಿಷ್ಠ ಕಾಯರಾದ ದ್ವಾರಪಾಲಕರನ್ನು ಕಾಣುತ್ತೇವೆ. ಈ ಪ್ರತಿಮೆಗಳಲ್ಲಿ ಎದ್ದು ಕಾಣುವ ಶಕ್ತಿ ಗಾಂಭೀರ್ಯ ಚೋಳರ ಸಾಂಕೇತಿಕ ಲಕ್ಷಣಗಳಾಗಿವೆ.

ಈ ದೇವಾಲಯದ ಗರ್ಭಗೃಹದ ಪ್ರವೇಶದ್ವಾರ ಪೂರ್ವದಿಕ್ಕಿನ ಕಡೆಗೆ ಇದೆ. ದಕ್ಷಿಣದಲ್ಲಿ ಶಿವನು ಒಂದು ಕತ್ತಿಯನ್ನು ಮತ್ತು ತ್ರಿಶೂಲವನ್ನು ಹಿಡಿದುಕೊಂಡು ಭೀಕರವಾಗಿ ಕುಳಿತಿರುವನು. ಪಶ್ಚಿಮದಲ್ಲಿ ಶಿವನು ಹತ್ತು ಕೈಗಳು ಹೊಂದಿದ್ದು ನೃತ್ಯ ಮಾಡುತ್ತಿರುವನು. ಪಕ್ಕದಲ್ಲಿ ವಿಷ್ಣುವು ಮದ್ದಳೆಯನ್ನು ಬಾರಿಸುತ್ತಿರುವನು. ಉತ್ತರದಲ್ಲಿ ದೇವಿಯು ಒಂದು ಕಮಲದ ಮೇಲೆ ಪದ್ಮಾಸನ ಭಂಗಿಯಲ್ಲಿ ಕುಳಿತ್ತಿದ್ದು, ಒಂದು ಕೈಯಲ್ಲಿ ಅಕ್ಷಮಾಲೆಯನ್ನು ಹಿಡಿದಿರುವಳು. ಇದೆಲ್ಲವನ್ನು ಪ್ರದಕ್ಷಿಣಾ ಪಥದ ಮೊದಲನೆಯ ಹಂತದಲ್ಲಿ ಕಾಣುತ್ತೇವೆ. ಎರಡನೆಯ ಹಂತದಲ್ಲಿ ಒಂದು ನೂರಾಎಂಟು ಚೌಕ ಅಂಕಣಗಳನ್ನು ಸುತ್ತಲೂ ಪಟ್ಟಿಯ ಹಾಗೆ ಕೆತ್ತಲಾಗಿದೆ. ಪ್ರತಿಯೊಂದು ಅಂಕಣದಲ್ಲಿಯೂ ನಾಲ್ಕು ಕರಗಳುಳ್ಳ ಶಿವನ ಬಗೆಬಗೆಯ ನೃತ್ಯ ಭಂಗಿಗಳನ್ನು ರೂಪಿಸಲಾಗಿದೆ. ಈ ನಾಟ್ಯ ಭಂಗಿಗಳು ಭರತನ ನಾಟ್ಯ ಶಾಸ್ತ್ರ ಗ್ರಂಥದಲ್ಲಿ ವಿವರಿಸಿದ ಹಾಗೆ ಕೆತ್ತಲಾಗಿದೆ. ಇಪ್ಪತ್ತೇಳು ಅಂಕಣಗಳು ಮಾತ್ರ ಅಪೂರ್ಣವಾಗಿ ಉಳಿದುಕೊಂಡಿವೆ.

ರಾಜರಾಜ ಚೋಳನು ಯುದ್ಧಗಳಲ್ಲಿ ತಾನು ಸಾಧಿಸಿದ ವಿಜಯಗಳ ನೆನಪಿಗಾಗಿ ಗಂಗೈಕೊಂಡ ಚೋಳಪುರಂ ಎಂಬಲ್ಲಿ ಬೃಹದೇಶ್ವರ ದೇವಾಲಯ ವನ್ನು ನಿರ್ಮಿಸಿದನು. ಈ ದೇವಾಲಯದ ನಿರ್ಮಾಣ ಅಪೂರ್ಣವಾಗಿದ್ದರೂ ಮೂರ್ತಿ ಶಿಲ್ಪಗಳು ಮಾತ್ರ ಇಂದಿಗೂ ಈ ಅರಸನ ದೈವ ಭಕ್ತಿಯನ್ನು ಮಹತ್ವಾಕಾಂಕ್ಷೆಯನ್ನು ಸಾರಿ ಹೇಳುತ್ತಿವೆ. ಈ ದೇವಾಲಯದ ರಚನೆ ಮತ್ತು ಮೂರ್ತಿ ಶಿಲ್ಪಗಳ ಸಂಯೋಜನೆ ತಂಜಾವೂರಿನ ಬೃಹದೇಶ್ವರ ದೇವಾಲಯವನ್ನು ಹೋಲುತ್ತವೆ.

ಚೋಳರ ಶಿಲ್ಪಕಲೆಗೆ ಇತರ ಮಾದರಿಗಳೆಂದು ಚಂಡೇಶಾನುಗ್ರಹ ಮೂರ್ತಿ ಅಂಕಣ ಐರಾವತೇಶ್ವರ ದೇವಸ್ಥಾನ, ತಿರುಮಲೈಪುರಂ ದೇವಸ್ಥಾನದ ಶಿಲ್ಪಗಳು, ಕಳುಗು ಮಲೈ ಎಂಬಲ್ಲಿಯ ಶಿಲಾ ದೇವಸ್ಥಾನ ಮುಂತಾದವುಗಳನ್ನು ಹೆಸರಿಸಬಹುದು. ಚೋಳರಿಂದ ಪ್ರಾರಂಭವಾಗಿ ಅಪೂರ್ಣಗೊಂಡ ಕೆಲವು ದೇವಸ್ಥಾನಗಳು ಪಾಂಡ್ಯ ವಂಶದ ಅರಸರು ಪೂರ್ಣಗೊಳಿಸಿದರೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಚೋಳರ ಶೈಲಿಯನ್ನೇ ಪಾಂಡ್ಯರೂ ಮುಂದುವರೆಸಿದ್ದರಿಂದ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಪಾಂಡ್ಯರು (ಕ್ರಿ.ಶ. ೧೧೦೦ರಿಂದ ೧೩೫೦ರ ವರೆಗೆ) ದಕ್ಷಿಣ ಭಾರತವನ್ನು ಆಳಿದ ಮತ್ತೊಂದು ಪ್ರಮುಖ ವಂಶಜರು. ತಿರುಮಲಾಪುರಂ ದೇವಾಲಯದ ಬ್ರಹ್ಮ, ಶಿವ, ವಿಷ್ಣು ಮತ್ತು ಗಣೇಶ ಪ್ರತಿಮೆಗಳು ಪಾಂಡ್ಯರ ಕಾಲದಲ್ಲಿ ಕೆತ್ತಲ್ಪಟ್ಟಿದ್ದರೂ ಪಲ್ಲವರ ಪ್ರಾರಂಭದೆಶೆಯ ಶಿಲ್ಪಕಲೆಯನ್ನು ಹೋಲುತ್ತವೆ. ಕಳುಗುಮಲೈ ದೇವಾಲಯದ ವಿಮಾನದ ಮೇಲೆ ಶಿವನು ಲಲಿತಾಸನದಲ್ಲಿ ಕುಳಿದ್ದು, ಸುತ್ತಲೂ ಗಣಗಳು ನೆರೆದಿರುವರು. ಪಾಂಡ್ಯರ ಶೈಲಿಯಲ್ಲಿ ಯಾವ ಪ್ರತ್ಯೇಕತೆಯು ಕಾಣಿಸುವುದಿಲ್ಲ. ಆದರೆ ಅವರು ಪಲ್ಲವರನ್ನು ನಂತರ ಚೋಳರನ್ನೂ ಅನುಕರಿಸಿದ್ದಾರೆ.

(ಮುಂದುವರಿಯುವುದು)

TRIMURTI
JEWELLERS
GOLD AND DIAMOND ORNAMENTS
460/4, Venkatesh Niwas,
Ground Floor, Bhaudaji Road,
Opp Mysore Association,
Matunga (C.Rly.) Mumbai-400 019.
Phone : 2402 3485

No. TECH/47-202/MBI/2003-05
Date of Posting : 10-01-2004

# ಸುತ್ತಮುತ್ತ

## ಸುವರ್ಣಗಿರಿ ಪ್ರಕಾಶನದ ಪ್ರಕಟಣೆಗೆ ಸಾಹಿತ್ಯ ಅಕಾಡೆಮಿ ಬಹುಮಾನ

ಸುವರ್ಣಗಿರಿ ಪ್ರಕಾಶನದ ಕೃತಿ ಘೋಳೀಮಡ್ಡಿ ಕತ್ತರಿ ನಾಟಕಕ್ಕೆ ಈ ಬಾರಿಯ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರಕಿದೆ.

ರಾ.ಕ. ನಾಯಕ್ ವಿರಚಿತ ಘೋಳೀಮಡ್ಡೀ ಕತ್ತರಿ ನಾಟಕವನ್ನು ಈ ಬಾರಿಯ ಉತ್ತಮ ನಾಟಕವೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಗುರುತಿಸಿ ಬಹುಮಾನಕ್ಕೆ ಆಯ್ಕೆ ಮಾಡಿದೆ. ರಾ.ಕ. ನಾಯಕರ ಪ್ರಸ್ತುತ ನಾಟಕ ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ 2001ರ ನಾಟಕ ರಚನಾ ಸ್ಪರ್ಧೆಯಲ್ಲಿ ಅತ್ಯುತ್ತಮ ನಾಟಕವೆಂದು ಬಹುಮಾನಕ್ಕೆ ಪಾತ್ರವಾಗಿತ್ತು. ಇದೇ ಕೃತಿಯನ್ನು ಸುವರ್ಣಗಿರಿ ಪ್ರಕಾಶನ 2002ರಲ್ಲಿ ಕೃತಿರೂಪದಲ್ಲಿ ಹೊರತಂದಿತ್ತು.

ಒಂದೇ ವಸ್ತುವಿನ ಸುತ್ತ ಬರೆದ ಎರಡು (ಪರ್ಯಾಯ) ನಾಟಕ ಇದಾಗಿದೆ. ಸುವರ್ಣಗಿರಿ ಪ್ರಕಾಶನದ ಪ್ರಕಟಣೆಗೆ ನಾಟಕ ಅಕಾಡೆಮಿಯ ಬಹುಮಾನ ಬಂದಿರುವುದಕ್ಕೆ ಸಂಸ್ಥೆಯ ನಿರ್ದೇಶಕ ಸದಾನಂದ ಸುವರ್ಣ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

## ಪ್ರೊ. ಎ. ವಿ. ನಾವುಡ ಅವರಿಂದ ವಿಶೇಷ ಉಪನ್ಯಾಸ

ಮುಂಬಯಿ : ಕನ್ನಡ ವಿಶ್ವವಿದ್ಯಾಲಯ ಹಂಪಿಯ ಭಾಷಾನಿಕಾಯದ ಡೀನ್ ಆಗಿರುವ ಪ್ರೊ. ಎ. ವಿ. ನಾವುಡ ಅವರು ಜಾನಪದ ಸಾಹಿತ್ಯದ ಸಂರಚನೆಯ ಹಿನ್ನೆಲೆಯಲ್ಲಿ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದರು. ಸೃಷ್ಟಿಶೀಲ ಜನಪದ ಕಲಾವಿದರನ್ನು ಅವರ ಅಭಿವ್ಯಕ್ತಿ ಮಾಧ್ಯಮಗಳ ಹಿನ್ನೆಲೆಯಲ್ಲಿ ಜಾನಪದ ಕವಿ, ಕಥೆಗಾರ ಎಂದು ಕರೆದು ಅವರನ್ನು ಗೌರವಿಸುವುದು ಅಗತ್ಯ. ಸಿರಿಪಾಡ್ದನಗಳ ಗಾಯಕರು ನಿಜವಾಗಿಯೂ ಪ್ರತಿಭಾವಂತರು. ಅವರಲ್ಲಿ ಒಂದು ಸೂತ್ರವಿರುತ್ತದೆ. ಆದರಿಂದಲೇ ಅವರು ವರ್ತಮಾನದ ವಿಷಯಗಳನ್ನು ಕಾವ್ಯವಾಗಿ ಮಾಡಬಲ್ಲ, ಸೂಕ್ಷ್ಮಸಂವೇದನೆಯನ್ನು ಹೊಂದಿರುತ್ತಾರೆ ಎಂದು ಪ್ರೊ. ನಾವುಡ ಅವರು ಅಭಿಪ್ರಾಯಪಟ್ಟರು.

ಅವರು ಇನ್ನೊಂದು ಉಪನ್ಯಾಸದಲ್ಲಿ ದಾಸ ಸಾಹಿತ್ಯದ ವಿಷಯವನ್ನು ಸ್ಥೂಲವಾಗಿ ವಿವರಿಸಿದರು. ವಚನ ಸಾಹಿತ್ಯದ ನಮೂನೆಯಲ್ಲಿ ದಾಸಸಾಹಿತ್ಯದ ಅಧ್ಯಯನ ಸಾಕಷ್ಟು ನಡೆಯಲಿಲ್ಲ. ಅನೇಕ ದಾಸರು ರಚಿಸಿದ ಕೃತಿಗಳು ಇನ್ನೂ ಮನೆಮನೆಯಲ್ಲಿ ಪೂಜೆಯ ವಸ್ತುಗಳಾಗಿ ಬಿದ್ದುಕೊಂಡಿವೆ. ಅವುಗಳ ವ್ಯವಸ್ಥಿತ ಅಧ್ಯಯನ ಆಗಬೇಕೆಂದು ಅವರು ಹೇಳಿದರು.

ಕನ್ನಡ ವಿಭಾಗದ ಮುಖ್ಯಸ್ಥ ಜಿ. ಎನ್. ಉಪಾಧ್ಯ ಅವರು ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಅನಂತರ ನಡೆದ ಸಾಹಿತ್ಯಸಂವಾದದಲ್ಲಿ ಶ್ರೀ ಎಸ್.ಎಸ್. ಕೆಲವಾಡಿ, ಜಯಲಕ್ಷ್ಮೀ ಪಾರ್ವತೀಕರ್, ಶ್ರೀಮತಿ ಸುಮನ್ ಚಿಪ್ಳೂಣ್‌ಕರ್, ಶ್ರೀ ಅರುಣ್‌ಕುಮಾರ್, ಮರಿಯಪ್ಪ ನಾಟೇಕರ್, ಶ್ರೀಮತಿ ಲಲಿತಾಗುಗ್ಗಳಶೆಟ್ಟಿ, ಮಹೇಶ್ ಹೆಗ್ಡೆ, ರವಿಕುಮಾರ್, ಮಲ್ಲಿಕಾ ಎನ್. ಮೊದಲಾದವರು ಭಾಗವಹಿಸಿದ್ದರು. ಉತ್ತಮ್ ನಾಯಕ್ ಅವರು ಧನ್ಯವಾದ ನೀಡಿದರು.

## ಶ್ರೀ ಆದಿಶಕ್ತಿ ಕನ್ನಡ ಸಂಘದ ವತಿಯಿಂದ ಡಾ. ಸಂಜೀವ ಶೆಟ್ಟಿಯವರಿಗೆ 'ಕನ್ನಡ ಸಂಜೀವಿನಿ'

''ಕನ್ನಡ ಸಂಜೀವಿನಿ'' ಡಾ. ಸಂಜೀವ ಶೆಟ್ಟಿ ಕನ್ನಡಕ್ಕಾಗಿ ಕೈಯೆತ್ತಿದ, ಕನ್ನಡಿಂದಲೇ ಸರ್ವಸ್ವವೆಂದು ತ್ರಿಕರಣ ಪೂರ್ವಕವಾಗಿ ಕನ್ನಡ ಕಟ್ಟುವ ಕಾಯದಲ್ಲಿ ಸುಮಾರು ಮೂರುವರೆ ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಸೋಮೈಯಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ, ಶಿಕ್ಷಣ ತಜ್ಞ, ಸಾಹಿತಿ ಡಾ. ಸಂಜೀವ ಶೆಟ್ಟಿ ಅವರಿಗೆ ಥಾಣೆಯ ಶ್ರೀ ಆದಿಶಕ್ತಿ ಕನ್ನಡ ಶಾಲೆಯು 'ಕನ್ನಡ ಸಂಜೀವಿನಿ' ಎಂಬ ಬಿರುದನ್ನು ನೀಡಿ ಸನ್ಮಾನಿಸಿರುವುದು

ಅತ್ಯುತ್ತಮ ಶಿಕ್ಷಕರನ್ನು ಗೌರವಿಸಬೇಕು. ಕತ್ತಲೆಯಿಂದ ಬೆಳಕಿನೆಡೆಗೆ ವಿದ್ಯಾರ್ಥಿಗಳನ್ನೊಯ್ಯುವಂತಹ ಶಿಕ್ಷಕರು ದೇವರಿಗೆ ಸಮಾನರಾಗಿದ್ದಾರೆ. ಅಂತಹವರಲ್ಲಿ ಶ್ರೇಷ್ಠ ಶಿಕ್ಷಕರಾದ ಡಾ. ಸಂಜೀವ ಶೆಟ್ಟಿ ಅವರನ್ನು ಸನ್ಮಾನಿಸುವ ಅವಕಾಶವನ್ನು ನನಗೆ ನೀಡಿರುವುದು ಖುಷಿ ತಂದಿದೆ. ನಾವೆಲ್ಲರೂ ಭಿನ್ನತೆಗಳನ್ನು ತೊರೆದು ಭಾರತೀಯರಾಗಿ ಬಾಳೋಣ. ಆದಿಶಕ್ತಿ ಕನ್ನಡ ಶಾಲೆಗೆ ನನ್ನಿಂದಾದ ಸರ್ವತೆರನ ಸಹಾಯವನ್ನು ನೀಡುವ ಪ್ರಯತ್ನವನ್ನು ಮಾಡುತ್ತೇನೆಂದು ಮ್ಹಾಡಾ ಅಧ್ಯಕ್ಷ ಶಾಸಕ ಸಚಿನ್ ಅಹಿರ್ ಅವರು ಹೇಳಿದರು. ಇವರು ಶ್ರೀ ಆದಿ ಶಕ್ತಿ ಕನ್ನಡ ಸಂಘ ಶಾಲೆ ಏರ್ಪಡಿಸಿದ್ದ ಡಾ. ಸಂಜೀವ ಶೆಟ್ಟಿ ಅವರ ಸನ್ಮಾನ ಹಾಗೂ ಬಹುಮಾನ ವಿತರಣೆಯ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು.

ಶ್ರೀ ಆದಿ ಶಕ್ತಿ ಕನ್ನಡ ಸಂಘ ಶಾಲೆಯು ಕನ್ನಡ ಶಿಕ್ಷಣದ ಉತ್ತಮ ಕೇಂದ್ರವಾಗಿದೆ. ನೂರರ ಫಲಿತಾಂಶದ ಕೀರ್ತಿ ಪಡೆದ ಖ್ಯಾತಿ ಶಾಲೆಗಿದೆ. ಆಡಳಿತ ವರ್ಗದ ವ್ಯವಸ್ಥೆ, ಶಿಕ್ಷಕರ ನಿಷ್ಠೆ ಹಾಗೂ ಪರಿಶ್ರಮ ಶ್ಲಾಘನೀಯವಾಗಿದೆ. ಶ್ರೇಷ್ಠ ಶಿಕ್ಷಕ ಡಾ. ಸಂಜೀವ ಶೆಟ್ಟಿ ಅವರಿಗೆ ''ಕನ್ನಡ ಸಂಜೀವಿನಿ'' ಎಂಬ ಬಿರುದು ನೀಡಿ ಗೌರವಿಸಿರುವುದು ಅತ್ಯಂತ ಅರ್ಥಪೂರ್ಣವಾದುದೆಂದು ಥಾಣೆ ಜಿಲ್ಲೆಯ ಹೋಟೆಲ್ ಮಾಲಿಕರ ಸಂಘದ ಅಧ್ಯಕ್ಷ ಲಾಯನ್ ಹರಿರಾಜ್ ಹೆಗ್ಡೆ ಅವರು ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು.

ಮುಖ್ಯ ಅತಿಥಿ ಸಚಿನ್ ಅಹಿರ್ ಡಾ. ಸಂಜೀವ ಶೆಟ್ಟಿ ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ, ಫಲಪುಷ್ಪ, ಸನ್ಮಾನ ಪತ್ರದೊಡನೆ ಕನ್ನಡ ಸಂಜೀವಿನಿ ಎಂಬ ಬಿರುದನ್ನು ನೀಡಿ ಗೌರವಿಸಿದರು. ಇತರ ಅತಿಥಿಗಳು ಕೂಡ ಪಾಲ್ಗೊಂಡರು.

'ಕನ್ನಡ ಸಂಜೀವಿನಿ' ಎಂಬ ಬಿರುದನ್ನು ನೀಡಿ ಗೌ ಗೌರವಿಸಿದುದು ಡಾಕ್ಟರೇಟ್ ಪದವಿಪಡೆದಷ್ಟೇ ಸಂತಸ ನೀಡಿದೆ, ಈ ಬಿರುದು ಕನ್ನಡ ತಾಯಿಗೆ ಗೌರವವೆಂದೇ ನಾನು ಭಾವಿಸಿದ್ದೇನೆ. ಕನ್ನಡ, ತುಳು, ಮರಾಠಿ, ಭಾಷಿಕರೆಲ್ಲರು ಸೇರಿ ನೀಡಿದ ಬಿರುದಿಗೆ ತಲೆಬಾಗಿದ್ದೇನೆ, ಇನ್ನಷ್ಟು ಸೇವೆಯಲ್ಲಿ ತೊಡಗಲು ಆದೇಶ ನೀಡಿದ್ದೀರಿ. ಶ್ರೀ ಆದಿಶಕ್ತಿ ಕನ್ನಡ ಸಂಘ ಶಾಲೆಯು ನೀಡಿದ ಬಿರುದು ಅವಿಸ್ಮರಣೀಯವಾಗಿದೆ. ಜ್ಞಾನದ ದಿವ್ಯ ಬೆಳಕಿನಲ್ಲಿ ನಾವೆಲ್ಲರೂ ಮಾನವರಾಗಿ ಭಾರತೀಯರಾಗಿ ಬಾಳೋಣ ಎಂದು ಡಾ. ಸಂಜೀವ ಶೆಟ್ಟಿ ಅವರು ಸನ್ಮಾನಕ್ಕೆ ಉತ್ತರಿಸುತ್ತಾ ಕೃತಜ್ಞತೆ ಸಲ್ಲಿಸಿದರು.

ಶಾಲೆಯ ಅಧ್ಯಕ್ಷರಾದ ಉಳ್ತೂರುಗುತ್ತು ವಾಮನ್ ಕೆ. ಶೆಟ್ಟಿ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮವನ್ನು ಸಾಹಿತಿ ವಿದ್ಯಾಧರ ಮುತಾಲಿಕ ದೇಸಾಯಿ ಅವರು ನಿರ್ದೇಶಿಸಿದರು.

## ಮಕ್ಕಳ ಮೇಳ ಬಡಮಕ್ಕಳ ಮಾನಸಿಕ ವಿಕಾಸಕ್ಕೆ ಪೂರಕವಾಗಲಿ - ಪಿ.ಎನ್. ಶಾನ್‌ಭಾಗ್

ಮುಂಬಯಿಯಂತಹ ಮಹಾನಗರದಲ್ಲಿ ನಮ್ಮ ಕನ್ನಡಿಗರು ಕನ್ನ ಮಾಧ್ಯಮದ ಮಕ್ಕಳಿಗೆ ವಿವಿಧ ರೀತಿಯ ಶೈಕ್ಷಣಿಕ ಸೌಕರ್ಯಗಳನ್ನು ನೀಡಿ ಸಹಕರಿಸುತ್ತಿರುವುದು ಅಭಿನಂದನಾರ್ಹವಾದುದು. ಮುಂಬಯಿಯ ಪ್ರತಿಷ್ಠಿತ ಹಿರಿಯ ಸಂಘ ಸಂಸ್ಥೆ ಎನ್ನಲಾದ ಕರ್ನಾಟಕ ಸಂಘ ಇತ್ತೀಚಿನ ವರ್ಷಗಳಲ್ಲಿ 'ಮಕ್ಕಳ ಮೇಳ'ದಂತಹ ಅದ್ದೂರಿಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಕನ್ನಡ ಮಾಧ್ಯಮದ ಬಡ ಮತ್ತು ಮಧ್ಯಮ ವರ್ಗದ ಎಲ್ಲ ಮಕ್ಕಳ ಮಾನಸಿಕ ವಿಕಾಸಕ್ಕೆ ನಡೆಸುವ ಪ್ರಯತ್ನ ಶ್ಲಾಘನೀಯವಾದುದು ಎಂದು ನಾರ್ತ್ ಕೆನರಾ ಜಿ.ಎಸ್.ಬಿ. ಕೋಪರೇಟಿವ್ ಬ್ಯಾಂಕ್ ಚೆಯರ್‌ಮ್ಯಾನ್ ಪಿ.ಎನ್. ಶಾನ್‌ಭಾಗ್ ಹೇಳಿದರು.

ಇಂದು ಕರ್ನಾಟಕ ಸಂಘದ ಡಾ. ಎಂ. ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಕರ್ನಾಟಕ ಸಂಘದ ಸಾಹಿತ್ಯ ಭಾರತಿ, ವಿದ್ಯಾವಿಕಾಸ ವಿಭಾಗ ಆಯೋಜಿಸಿದ 'ಮಕ್ಕಳ ಮೇಳ' ಸಮಾರಂಭದ ಸಮಾರೋಪ ಮತ್ತು ಬಹುಮಾನ ವಿತರಣಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು.

ಶುದ್ಧ ಕನ್ನಡ ಮಾತನಾಡಲಾಗದ ನನಗೆ ಕನ್ನಡಿಗರ ಬಗ್ಗೆ, ಬಡ ಸಮಾಜದ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇದ್ದು, ಇಂದು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ಮಕ್ಕಳಿಗೆ ಬಹುಮಾನ ನೀಡುವುದಕ್ಕೆ ಅತ್ಯಂತ ಹರ್ಷವಾಗುತ್ತಿದೆ ಎಂದ ಅವರು ಕರ್ನಾಟಕ ಸಂಘ ಮತ್ತಿತರ ಸಂಘ ಸಂಸ್ಥೆಗಳೂ ಬಡ ವಿದ್ಯಾರ್ಥಿಗಳಿಗೆ ನೀಡುವ ಸೌಕರ್ಯಗಳಿಗೆ ತನ್ನಿಂದಾದಷ್ಟು ಮಟ್ಟದ ಸಹಾಯ ಹಸ್ತ ನೀಡಲು ಸಿದ್ಧನಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಅತಿಥಿ ಶಾನ್‌ಭಾಗ್ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪಡೆದ ಡಾ. ಸಂಜೀವ ಶೆಟ್ಟಿಯವರನ್ನು ಸನ್ಮಾನಿಸಿದರು. ವಿಜೇತರುಗಳಿಗೆ ಪದಕ, ನೆನಪಿನ ಕಾಣಿಕೆ, ಪ್ರಮಾಣ ಪತ್ರ ನೀಡಿ ಗೌರವಿಸಿದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938